Rs. 20/-

# ಪುಟಕ್ಕೊಂದು ಕಥೆ



# ಪುಟಕ್ಕೊಂದು ಕಥೆ

(ಸಂಪುಟ - ೧)

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಪ್ರಕಾಶನ, 1993

© ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್

ಪುಟಕ್ಕೊಂದು ಕಥೆ : ಮಕ್ಕಳಿಗಾಗಿ ಚಿತ್ರಕಥಾ ಸಂಗ್ರಹ (ಸಂಪುಟ ೧) ,1993

ಬೆಲೆ = ರೂ. 20/-    ಎರಡನೇ ಮುದ್ರಣ - 1995

ಪ್ರಕಾಶನ :

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
26/1, ವಸಂತಪ್ಪ ಗಾರ್ಡನ್,
ದೂಪನಹಳ್ಳಿ,
ಎಚ್.ಎ.ಎಲ್. 2ನೇ ಹಂತ,
ಬೆಂಗಳೂರು - 560 008.

ಚಿತ್ರಕಲೆ : ಎನ್. ಎಸ್. ಪೊನ್ನಪ್ಪ

ಮುದ್ರಣ : ಸ್ಕ್ಯಾನ್ ಪ್ರಿಂಟ್, ಬೆಂಗಳೂರು - 4. ದೂರವಾಣಿ : 628880

CH-100 N93
07169
COMMUNITY HEALTH CELL LIBRARY AND DOCUMENTATION

# ಪರಿವಿಡಿ


| | |
|---|---|
| ಮುನ್ನುಡಿ | 5 |
| ಭೀಮದ ಉದ್ದೇಶಗಳು | 6 |
| ಚಿತ್ರಕಥೆ ಬಿಡಿಸುವಾಗ | 8 |
| ಭೀಮ ಬಗ್ಗೆ ಒಂದು ಮಾತು | 9 |
| ಕಳ್ಳರಿಗೆ ಮೋಸ ಮಾಡಿದ ತೆನಾಲಿ ರಾಮ | 10 |
| ದುಡಿಮೆಯ ಫಲ | 12 |
| ಜಂಭದ ಕೋಳಿಗೆ ಗೋಳಾಯ್ತು | 14 |
| ಸತ್ಯಕ್ಕೆ ಜಯ | 16 |
| ಆಪತ್ತಿಗಾದ ಸ್ನೇಹ | 18 |
| ಮೂರ್ತಿ ಪುಟ್ಟದಾದರೂ ಸಹಾಯ ದೊಡ್ಡದು | 20 |
| ತುಂಟ ನಾಯಿ | 22 |
| 'ಬೆಂಗಳೂರು' – ಈ ಹೆಸರಿನ ಬಗ್ಗೆ ಹೀಗೊಂದು ಕಥೆ | 24 |
| ಜಾಣ ಬೀರಬಲ್ | 26 |
| ಮೊದ್ದುಮಣಿ | 28 |
| ತೋಳ ಬಂತು ತೋಳ | 30 |
| ಬೇಸ್ತು ಬಿದ್ದ ಬೇಡ | 32 |
| ಮೈಗಳ್ಳನಿಗೆ ಗೋಳಾಯ್ತು | 34 |
| ಪಾಲಿಗೆ ಬಂದದ್ದು | 36 |
| ಮಣ್ಣು ಮುಕ್ಕಿದ ಜಾದೂಗಾರ | 38 |
| ಇಲ್ಲಿಂದ ಅಲ್ಲಿಗೆ | 40 |
| ನಿಜದ ತಲೆಯ ಮೇಲೆ ಹೊಡೆದ ಹಾಗೆ | 42 |
| ಹಾಲು ನೀರಿನ ಪಾಲು | 44 |
| ಬಂಗಾರವೂ ಬೇಡವಾಗುವುದುಂಟೆ ? | 46 |
| ಬೆರಳು ತೋರಿಸಿದರೆ ಅಂಗೈ ನುಂಗುವುದೇ ? | 48 |
| ಆಕಾಶದ ಅಬ್ಬರ | 50 |
| ತಲೆಗೊಂದು ಮಾತು | 52 |
| ಗೋಡೆ ಗಂಡಾಂತರ | 54 |
| ಕತ್ತೆಯ ತಕ್ಕಡಿ | 56 |

## ಮುನ್ನುಡಿ

ಮಕ್ಕಳು ಕೆಲಸ ಮಾಡುವ ದೃಶ್ಯ ನಮ್ಮ ದೇಶದಲ್ಲಿ ಬಹಳ ಸಾಮಾನ್ಯವಾದದ್ದು. ಆದರೂ, ಎಲ್ಲೆಲ್ಲೂ ಕಾಣಿಸುವ ಈ ಮಕ್ಕಳ ಕಡೆ ಗಮನ ಹರಿಸುವ ಜನ ಬಹಳ ಕಡಿಮೆ. ಭಾರತದಲ್ಲಿ 111 ಮಿಲಿಯನ್‌ಗಿಂತಲೂ ಹೆಚ್ಚು ಮಕ್ಕಳು ಹೊಟ್ಟೆ-ಬಟ್ಟೆಗಾಗಿ ಕಷ್ಟಪಟ್ಟು ದುಡಿಯಲೇ ಬೇಕಾಗಿದೆ. ಈ ಸಂಖ್ಯೆ ನೋಡಿ ನಾವು ಬರಿ ಬೆಚ್ಚುವುದಲ್ಲ, ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ. ಈ ಪರಿಸ್ಥಿತಿ ಬದಲಾಗಲೇಬೇಕು. ಒಂದಲ್ಲ ಒಂದು ದಿನ ಮಕ್ಕಳು ಕೆಲಸ ಮಾಡಬೇಕಾದ ಅನಿವಾರ್ಯತೆ ಇಲ್ಲವಾಗಬೇಕು. ಎಲ್ಲ ಮಕ್ಕಳಿಗೂ ಆಡುವುದಕ್ಕೆ, ಕಲಿಯುವುದಕ್ಕೆ, ತಮ್ಮ ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ, ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಅವಕಾಶಗಳು ದೊರೆಯಬೇಕು. ಅವರಿಗೆ ರಕ್ಷಣೆ, ಪ್ರೀತಿ, ಅಕ್ಕರೆ ಸಿಗಬೇಕು.

ಈ ನಿಟ್ಟಿನಲ್ಲಿ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ 1985ರಿಂದ ಕೆಲಸ ಮಾಡುತ್ತಿದೆ. ಬಾಲ ಕಾರ್ಮಿಕರ ರಂಗದಲ್ಲಿ ಮಾಡುತ್ತಿರುವ ಅವರ ಕೆಲಸಕ್ಕೆ ದುಡಿಯುವ ಮಕ್ಕಳ ಜೊತೆಯ ನೇರ ಸಂಪರ್ಕವೇ ಅಡಿಪಾಯ. ಈಗ 1,800ಕ್ಕೂ ಹೆಚ್ಚು ದುಡಿಯುವ ಮಕ್ಕಳ ಜೊತೆ ಅವರ ಕೆಲಸ ಬೆಂಗಳೂರು ಹಾಗೂ ಬಸ್ರೂರುಗಳಲ್ಲಿ ನಡೆದಿದೆ. ಜೊತೆಗೆ ಸಂಸ್ಥೆಯು ಕಾನೂನು, ಸಂಶೋಧನೆ, ಸಂವಹನೆ ಮತ್ತು ವಿವಿಧ ರೀತಿಯ ಸಂಪರ್ಕ ಜಾಲಗಳನ್ನು ಬೆಳಸಿಕೊಳ್ಳುವತ್ತಲೂ ನಿರತವಾಗಿದೆ.

ಈ ಕಥಾ ಸಂಗ್ರಹ, ಬಾಲ ಕಾರ್ಮಿಕರ ಗೋಡೆ ಪತ್ರಿಕೆ, 'ಭೀಮ'ದಲ್ಲಿ ಪ್ರಕಟವಾಗಿದ್ದ ಚಿತ್ರಕಥೆಗಳ ಮರುಪ್ರಕಟಣೆ. ಈ ಕನ್ನಡ ಮಾಸ ಪತ್ರಿಕೆಯನ್ನು ಸಿ.ಡಬ್ಲ್ಯು.ಸಿ. ನವೆಂಬರ 1989ರಿಂದ ಹೊರ ತರುತ್ತಿದೆ. ಕಥೆಗಳ ಜೊತೆಯಲ್ಲಿ ಮಕ್ಕಳು ಹೆಚ್ಚು ಆಲೋಚಿಸಲು, ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿಕೊಳ್ಳಲು ಪ್ರೋತ್ಸಾಹ ನೀಡುವ ಕೆಲವು ಚರ್ಚೆಯ ಅಂಶಗಳೂ ಸೇರಿವೆ. ಜೊತೆಗೆ ಕಥೆಗಳಿಗೆ ಮಕ್ಕಳಿಂದ ಬಂದ ಕೆಲವು ಪ್ರತಿಕ್ರಿಯೆಗಳೂ ಇವೆ.

# ಭೀಮದ ಉದ್ದೇಶಗಳು

* ಮಕ್ಕಳ ಭಾವನೆ ಹಾಗೂ ಸೃಜನಶಕ್ತಿಯನ್ನು ವ್ಯಕ್ತಪಡಿಸಲು ದಾರಿ ಮಾಡಿಕೊಡುವುದು.

* ಮಕ್ಕಳಲ್ಲಿ ಒಗ್ಗಟ್ಟನ್ನು, ತಾವೆಲ್ಲ ಒಂದೇ ಎನ್ನುವ ಭಾವನೆಯನ್ನು ಬೆಳೆಸುವುದು.

* ಮಕ್ಕಳಿಗೆ ಆಸಕ್ತಿಯಿರುವ ಹಾಗೂ ಅವರ ಜೀವನಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸುವುದು.

* ಯೋಚಿಸುವುದು, ಕಲ್ಪಿಸುವುದು, ಚರ್ಚೆ ಮಾಡುವುದು – ಇವುಗಳಲ್ಲಿ ಮಕ್ಕಳು ಹೆಚ್ಚು ಹೆಚ್ಚು ಭಾಗವಹಿಸುವಂತೆ ಮಾಡುವುದು. ತಮ್ಮ ಜೀವನದ ಬಗ್ಗೆ ಮಾತ್ರ ಅಲ್ಲದೆ ಬೇರೆ ಮಕ್ಕಳ ಪರಿಸ್ಥಿತಿ, ಸಮಾಜ, ದೇಶದ ಹಾಗೂ ಇಡೀ ಪ್ರಪಂಚದ ಬಗ್ಗೆ ವಿಚಾರ ಮಾಡಲು ಪ್ರೋತ್ಸಾಹ ಮಾಡುವುದು.

* ಹೊಸ ವಿಷಯ, ವಿಚಾರಗಳ ಪರಿಚಯದ ಮೂಲಕ ನ್ಯಾಯ, ಶಾಂತಿ, ಸಹಾನುಭೂತಿ ಹಾಗೂ ಸಭ್ಯತೆ ಇರುವ ಒಳ್ಳೆ ಸಮಾಜ ಕಟ್ಟುವುದಕ್ಕೆ ಪ್ರೇರಣೆ ನೀಡುವುದು.

## ಭೀಮದಲ್ಲಿ ಏನೇನಿದೆ ?

ಭೀಮ ಪತ್ರಿಕೆಯ ಪ್ರತಿಯೊಂದು ವಿಭಾಗಕ್ಕೂ ಒಂದು ಮುಖ್ಯ ಉದ್ದೇಶ ಹಾಗೂ ಪಾತ್ರವಿದೆ. ಈ ಪತ್ರಿಕೆಯಲ್ಲಿ ಎರಡು ಭಾಗಗಳಿವೆ.

ಮಕ್ಕಳ ವಿಭಾಗ – ಈ ವಿಭಾಗದಲ್ಲಿ ಮಕ್ಕಳು ತಮ್ಮ ಭಾವನೆ ಹಾಗೂ ಸೃಜನಶಕ್ತಿಯನ್ನು ವ್ಯಕ್ತಪಡಿಸುತ್ತಾರೆ.

ಕಲಿಯುವಿಕೆ ವಿಭಾಗ – ಸಿ.ಡಬ್ಲ್ಯು.ಸಿ. ಈ ವಿಭಾಗದಲ್ಲಿ ಅನೇಕ ರೀತಿಯ ವಿಚಾರಗಳನ್ನು ಮಕ್ಕಳಿಗಾಗಿ ಮುಂದಿಡುತ್ತದೆ.

ಈ ವಿಭಾಗದ ಅಂಶಗಳು ಹೀಗಿವೆ :

### (ಅ) ದೇಹ ಹಾಗೂ ಆರೋಗ್ಯದ ಬಗ್ಗೆ ಮಾಹಿತಿ

ಈ ಭಾಗದ ಮುಖ್ಯ ಒತ್ತು ಮಕ್ಕಳು ದೇಹವನ್ನು ಚೆನ್ನಾಗಿ ಅರಿತು ಅದನ್ನು ಪೋಷಿಸುವತ್ತ ಹಾಗೂ ಖಾಯಿಲೆಯನ್ನು ತಡೆಗಟ್ಟುವುದು ಅದನ್ನು ಗುಣ ಮಾಡುವುದಕ್ಕಿಂತ ಮುಖ್ಯ ಎನ್ನುವತ್ತ. (ಸ್ವಂತವಾಗಿ ಅರಿತ ಜ್ಞಾನದ ಬಗ್ಗೆ ಗೌರವ ಹುಟ್ಟಿಸಲೂ ಇದು ಪ್ರಯತ್ನಿಸುತ್ತದೆ – ದೇಹಕ್ಕೆ ಯಾವ ರೋಗವೂ ತಗಲದ ಹಾಗೆ ಕೈಲಾದ ಮಟ್ಟಿಗೆ ನೋಡಿಕೊಳ್ಳುವುದು. ರೋಗವನ್ನು ಅತಿ ಸರಳವಾಗಿ, ಬೇಗ ತಡೆಗಟ್ಟುವುದು, ರೋಗವನ್ನು ಹೆಚ್ಚಾಗದಂತೆ ನೋಡಿಕೊಳ್ಳುವುದು; ವೈದ್ಯರ ಸಹಾಯ ಯಾವಾಗ ಮತ್ತು ಹೇಗೆ ಬೇಕಾಗುತ್ತದೆ ಎಂದು ತಿಳಿದುಕೊಳ್ಳುವುದು; ಅದನ್ನು ಹೇಗೆ ಪಡೆಯಬೇಕೆಂದು ತಿಳಿಯುವುದು ಮತ್ತು ಆರೋಗ್ಯ ವ್ಯವಸ್ಥೆಗಳ ಅನುಕೂಲತೆಗಳ ಬಗ್ಗೆ ತಿಳಿದುಕೊಳ್ಳುವುದು – ಇವೆಲ್ಲದರತ್ತಲೂ ಇದು ಗಮನ ಸೆಳೆಯುತ್ತದೆ.

**(ಆ) ಸಮಾಚಾರ ವಿಭಾಗ**

ಇದು ಎರಡು ತರಹದ ಸುದ್ದಿಗಳನ್ನು ಹೊಂದಿರುತ್ತದೆ.

(1) ಇಲ್ಲಿ ಮಕ್ಕಳಿಗೆ ಆತ್ಮೀಯ ವಿಷಯಗಳು ಅಂದರೆ, ಮಕ್ಕಳು ತಾವೇ ಭಾಗವಹಿಸಿದ, ಭಾಗವಹಿಸಬಹುದಾದ ಘಟನೆಗಳು, ಸಂದರ್ಭಗಳ ಬಗ್ಗೆ ವರದಿಗಳು ಹಾಗೂ ಅವರ ಪರಿಸ್ಥಿತಿಯನ್ನು ಅವರೇ ಸುಧಾರಿಸಿಕೊಳ್ಳಲು ಬೇಕಾಗಬಹುದಾದ ಮಾಹಿತಿಗಳು ಇರುತ್ತವೆ.

(2) ಇದು ಮಕ್ಕಳಿಗೆ ಪ್ರಾಯೋಗಿಕವಾಗಿ ಬಳಸಲಾಗದಿದ್ದರೂ, ಅವರಿಗೆ ಸಂಬಂಧಪಟ್ಟ ವಿಷಯಗಳು ಮತ್ತು ಅವರ ಮನಸ್ಸನ್ನು ಹಿಗ್ಗಿಸಲು ಹೊಸ ವಿಚಾರಗಳನ್ನು ಹೊಂದಿರುತ್ತದೆ. ಮಕ್ಕಳ ಮತ್ತು ಕಾರ್ಯಕರ್ತರ ಚರ್ಚೆಗಳು ಪ್ರಕಟವಾದ ವಿಷಯಕ್ಕೆ ಸೀಮಿತವಾಗದೆ, ಹೆಚ್ಚಿನ ಅರ್ಥಗಳನ್ನು ಹುಡುಕಬೇಕಾಗುತ್ತದೆ. ಭೀಮದಲ್ಲಿನ ಬರಹಗಳು ಚುಟುಕಾಗಿರುತ್ತದೆ. ಇವು ಪರಿಣಾಮಕಾರಿಯಾಗಲು ಮುಖ್ಯವಾಗಿ ಚರ್ಚೆಯ ಮಾಧ್ಯಮ ಆಗಬೇಕು. ಮಕ್ಕಳ ಅರಿವನ್ನು ಹುಟ್ಟಿಸಲು, ಅವರಲ್ಲಿ ಹೊಸ ಯೋಚನೆಗಳನ್ನು ಬೆಳೆಸಲು ದಾರಿಯಾಗಬೇಕು.

**(ಇ) ಮಕ್ಕಳಿಗೆ ಮಾದರಿ**

ಇದು ಮಕ್ಕಳಲ್ಲಿ ಪ್ರೇರಣೆ ಹುಟ್ಟಿಸಲು ಪ್ರಯತ್ನ. ಹೊಸದನ್ನು ಸಾಧಿಸಿಯೋ, ತಮ್ಮ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿಯೋ, ಮಾದರಿಯಾಗಿರುವ ಮಗುವಿನ/ಮಕ್ಕಳ ಬಗ್ಗೆ ಇದರಲ್ಲಿ ಚರ್ಚೆಯಾಗುತ್ತದೆ. ಇದು ಸಾಧಿಸಿದವರಿಗೆ ಮೆಚ್ಚುಗೆಯಾಗಿ, ಇತರ ಮಕ್ಕಳಿಗೆ ಸ್ಫೂರ್ತಿಯಾಗುತ್ತದೆ. ಅವರು ತಮ್ಮಲ್ಲಿ ಶಕ್ತಿಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

**(ಈ) ಚಿತ್ರಕಥೆ**

ಎಲ್ಲ ಮಕ್ಕಳಿಗೂ ಕಥೆಗಳೆಂದರೆ ಬಲು ಇಷ್ಟ. ಭಾರತದಲ್ಲಿ ಪ್ರಾಚೀನ ಕಥೆಗಳ ಇತಿಹಾಸವೇ ಇದೆ. ವಿಶ್ವದ ಮೂಲೆ ಮೂಲೆಗಳಿಂದ ಬಂದ ಕಥೆಗಳೂ ಎಲ್ಲರಿಗೂ ಅನ್ವಯಿಸುತ್ತದೆ. ಈ ಕಥೆಗಳು ಜೀವನ ಹಾಗೂ ಸಮಾಜದ ಬಗ್ಗೆ ಒಳನೋಟಗಳನ್ನು ಬೀರುತ್ತವೆ. ಈ ಮೂಲಕ ಮಕ್ಕಳನ್ನು ಭಾರತೀಯ, ಮಾನವ ಜನಾಂಗದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಪರಿಚಯಿಸುತ್ತವೆ.

ಚಿತ್ರಗಳು ಮಕ್ಕಳಿಗೆ ಬಹು ಪ್ರಿಯ. ಹಾಗಾಗಿ ನಾವು ಈ ಕಥೆಗಳನ್ನು ಚಿತ್ರೀಕರಿಸಲು ನಿರ್ಧರಿಸಿದೆವು. ಈ ಕಥೆಗಳನ್ನು ಕ್ಷೇತ್ರ ಕಾರ್ಯಕರ್ತರು ತಮ್ಮ ಚರ್ಚೆಗಾಗಿ ಉಪಯೋಗಿಸಬೇಕು. ಕಥೆ ಹೇಳುವುದು ಎಲ್ಲರಿಗೂ ಖುಷಿ ಕೊಡಲು, ಬರವಣಿಗೆ ಕಲಿತ ಮಕ್ಕಳು ಕಥೆಗಳನ್ನು ಓದಿ, ಬೇರೆಯವರಿಗೆ ತಿಳಿಸಿ – ಅವರಲ್ಲೂ ಓದುವ ಬಯಕೆಯನ್ನು ಹುಟ್ಟಿಸಲು, ಮಕ್ಕಳು ತಮಗೆ ತಿಳಿದಿರುವ ಅಥವಾ ತಾವೇ ಕಟ್ಟುವ ಕಥೆಗಳನ್ನು ಚಿತ್ರಿಸಲು, ಈ ಚಿತ್ರಕಥೆಗಳು ಕಾರಣವಾದಾಗ ಮಾತ್ರ ನಿಜವಾಗಿ ಸಫಲವಾದಾವು.

## ಚಿತ್ರಕಥೆ ಬಿಡಿಸುವಾಗ

ಭೀಮ ಪತ್ರಿಕೆಯ ಕಥೆಗಳನ್ನು ಚಿತ್ರೀಕರಿಸುವುದು ನನ್ನ ಪಾಲಿಗೆ ಸಂತೋಷದ ಸಂಗತಿ. ಅದರಲ್ಲೂ ಸಾಹಿತ್ಯ ಹಾಗೂ ಸಂಸ್ಕೃತಿ ಬಗ್ಗೆ ಬೇರೆ ಯಾವ ಮಾಧ್ಯಮದಿಂದಲೂ ತಿಳಿದುಕೊಳ್ಳಲು ಅವಕಾಶವಿಲ್ಲದ ನಮ್ಮ ಸಮಾಜದ ದುಡಿಯುವ ಮಕ್ಕಳ ಗಮನ ಸೆಳೆಯುವುದಕ್ಕಾಗಿ ಎನ್ನುವುದು ಇನ್ನೂ ಹೆಚ್ಚು ಸಂತೋಷ. ಮಕ್ಕಳು ಮಾತ್ರವಲ್ಲ, ಹಿರಿಯರೂ ಈ ಕಥೆಗಳನ್ನು ಓದಿ ಸಂತೋಷಪಡಲಿ ಎನ್ನುವುದು ನನ್ನ ಅಭಿಲಾಷೆ.

"ಮಕ್ಕಳು ನಿಮ್ಮ ಕೆಲಸವನ್ನು ಬಹಳ ಇಷ್ಟಪಟ್ಟಿದ್ದಾರೆ. ಅವರು ಬಹಳ ಎಚ್ಚರಿಕೆಯಿಂದ ದೊಡ್ಡವರ ಕಣ್ಣು ತಪ್ಪಿಸಬಹುದಾಗ ಸೂಕ್ಷ್ಮ ವ್ಯತ್ಯಾಸಗಳನ್ನು ತೋರಿಸಿಕೊಡುತ್ತಾರೆ" ಎಂದು ಕೇಳಿದ್ದೇನೆ. ಮಕ್ಕಳಿಂದ ದೊರೆಯುವ ಪ್ರತಿಕ್ರಿಯೆ ನನಗೆ ಉತ್ತೇಜನ ಕೊಡುತ್ತದೆ.

ಜನರು ಯಾವುದೇ ಭಾಷೆಯಲ್ಲಿ ವ್ಯಕ್ತಪಡಿಸಲಿ, ಅವರ ನಗುವಿನ ಭಾಷೆ ಒಂದೇ. ಈ ಕಥೆಗಳನ್ನು ಹೊರ ತರುವ ನಮಗೆ ಮಕ್ಕಳ ಮುಖದಲ್ಲಿನ ನಸು ನಗು ತೃಪ್ತಿ ಕೊಡುತ್ತದೆ.

ಎನ್. ಎಸ್. ಪೊನ್ನಪ್ಪ

(ಎನ್.ಎಸ್. ಪೊನ್ನಪ್ಪ ಅವರು ಮೊದಲು ಶಿಲ್ಪಿಯಾಗಿದ್ದರು. 10 ವರ್ಷಗಳ ಹಿಂದೆ ಅವರು ವ್ಯಂಗ್ಯಚಿತ್ರ ಬಿಡಿಸಲಾರಂಭಿಸಿದರು. ಈಗ ಅವರು ಭೀಮ ಪತ್ರಿಕೆ ಮಾತ್ರವಲ್ಲದೆ, ದಿ ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು, ದಿ ಎಕೋನಮಿಸ್ಟ್ ಮತ್ತು ದಿ ಮಿಡ್- ಡೇ, ಬೊಂಬಾಯಿ, ಪತ್ರಿಕೆಗಳಿಗೂ ಬರೆಯುತ್ತಾರೆ. )

# ಭೀಮದ ಬಗ್ಗೆ ಒಂದು ಮಾತು

ಭೀಮ ಪತ್ರಿಕೆಯ ಜವಾಬ್ದಾರಿ ದೊಡ್ಡದು. ಬಾಲ ಕಾರ್ಮಿಕರ ಸರ್ವತೋಮುಖವಾದ ಬೆಳವಣಿಗೆಗೆ ಮೀಸಲಾದ ಈ ಪತ್ರಿಕೆ ಅನೇಕ ಪಾತ್ರಗಳನ್ನು ವಹಿಸಬೇಕಾಗುತ್ತದೆ. ಗೆಳತಿ/ಗೆಳೆಯನಾಗಿ, ಒಡಹುಟ್ಟಿದವನು/ಳು ಆಗಿ, ಮಾರ್ಗದರ್ಶಿಯಾಗಿ ಮಾತ್ರವಲ್ಲ, ಶಿಕ್ಷಕರಾಗಿಯೂ ಅನೇಕ ಸ್ವರಗಳನ್ನು ಮಿಡಿಯಬೇಕಾಗುತ್ತದೆ. ಈ ಪಾತ್ರ ಸುಲಭವಲ್ಲ, ತಯಾರಿ ಇಲ್ಲದೆ ಸಾಧ್ಯವಾಗುವುದಿಲ್ಲ.

ನಾಲ್ಕು ಅಂಚಿನ ಚೌಕಟ್ಟಿನೊಳಗೆ ಭೀಮ ಪ್ರತಿ ತಿಂಗಳೂ ಹೊಸ ವಿಚಾರಗಳನ್ನು ಎತ್ತಿ ಹಿಡಿಯುತ್ತಾ, ವಾದಗಳನ್ನು ಮಂಡಿಸುತ್ತಾ, ಸಾಧನೆಗಳನ್ನು ವಿಜೃಂಭಿಸುತ್ತಾ, ನೋವು ನಲಿವುಗಳನ್ನು ಹಂಚಿಕೊಳ್ಳುತ್ತಾ ಹೊಸ ಚಿತ್ರಗಳನ್ನು ಮೂಡಿಸುತ್ತದೆ.

ಪ್ರತಿ ತಿಂಗಳೂ ಪ್ರಕಟವಾಗುವ ಚಿತ್ರಕಥೆ ಈ ಭಾವನಾ ಶ್ರೇಣಿಯ ಒಂದು ಅಂಶ. ಭೀಮದ ಸಕ್ರಿಯ ಜೀವನದಲ್ಲಿ ಭಾಗವಹಿಸುವ ನನಗೆ ಚಿತ್ರಕಥೆಯ ಆಯ್ಕೆ ಅಡ್ಡಾದಿಡ್ಡಿಯಲ್ಲ, ಅದರ ಉದ್ದೇಶ ಬರಿ ರಂಜನೆಯಲ್ಲ ಎಂದು ತಿಳಿದಿದೆ. ರಂಜಿಸುವುದು ಚಿತ್ರಕಥೆಯ ಮುಖ ಗುರಿಗಳಲ್ಲಿ ಒಂದಾದರೂ, ಅದನ್ನು ಮೀರಿ ಕೆಲವು ಸೂಕ್ಷ್ಮಗಳನ್ನು ಚಿತ್ರಿಸಲು, ಸತ್ಯಗಳನ್ನು ಗುರುತಿಸಲು ಅದು ಪ್ರಯತ್ನಿಸಬೇಕಾಗುತ್ತದೆ. ಕಥೆ ಕಚುಗುಳಿ ಇಟ್ಟ ನಗು ಮಾಸುತ್ತಿದ್ದಂತೆಯೇ ಅದರ ಪದರಗಳಲ್ಲಿ ಹುದುಗಿರುವ ಅರ್ಥಗಳಿಗಾಗಿ ಹುಡುಕಾಟ ಶುರುವಾಗಬೇಕಾಗುತ್ತದೆ.


ಈ ಪ್ರಕ್ರಿಯೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಚಿತ್ರಕಥೆಯ ಸುತ್ತಲ ಪಟ್ಟಿಯನ್ನು ನಾನು ಹೊಸ ಮಾಹಿತಿಯನ್ನೂ, ಒಳ ದೃಷ್ಟಿಯನ್ನೂ ಚಿಮ್ಮಿಸಲು ಬಳಸುತ್ತೇನೆ. ಸಾಧ್ಯವಾದಾಗ ಕಥೆಯ ಸುತ್ತ ಜಾಗದಲ್ಲಿ ಚಿತ್ರಕಥೆಗೆ ಹೆಚ್ಚಿನ ಸಂದೇಶಗಳನ್ನು ಅಳವಡಿಸುತ್ತೇನೆ. ಸಾಮಾನ್ಯವಾಗಿ ಇದು ಕಥೆಯ ಮುಖ್ಯ ವಿಷಯವನ್ನೋ, ಪಾತ್ರವನ್ನೋ, ಕ್ರಿಯೆಯನ್ನೋ ಗುರುತಿಸಿ, ಕಥೆಯ ಸಂದರ್ಭದ ವ್ಯಾಪ್ತಿಯನ್ನು ಹೆಚ್ಚಿಸಲು ಸೂಕ್ತ ಚಿತ್ರಗಳ ಬಳಕೆಯಿಂದ ಆಗುತ್ತದೆ.

ನನಗೆ ಭೀಮದ ರಚನೆಯ ಬೌದ್ಧಿಕ ಹಾಗೂ ಭೌತಿಕ ಹಂತಗಳು ಪ್ರತಿ ಸಾರಿಯೂ ಖುಷಿ ನೀಡುತ್ತದೆ. ಶಕ್ತಿ ಹೆಚ್ಚಾಗಲಿ, ಭೀಮಕ್ಕೆ ಹಾಗೂ ಮಕ್ಕಳಿಗೆ.

*ಮಲ್ಲಿಕಾರ್ಜುನ್ ಕೊಂಡೂರಿ*

(ಮಲ್ಲಿಕಾರ್ಜುನ್ ಕೊಂಡೂರಿ ಚಿತ್ರ ವಿನ್ಯಾಸಕರು. ಅವರು ರಾಷ್ಟ್ರೀಯ ಡಿಜೈನ್ ಸಂಸ್ಥೆಯ ಬೆಂಗಳೂರು ವಿಭಾಗದೊಂದಿಗೆ ಕೆಲಸ ಮಾಡುತ್ತಿದ್ದಾರೆ. ಭೀಮದ ಚಿತ್ರ ವಿನ್ಯಾಸವನ್ನು ಸುಮಾರು ಅದರ ಪ್ರಾರಂಭದಿಂದಲೂ ಮಾಡುತ್ತಿದ್ದಾರೆ.)

# ಕಳ್ಳರಿಗೆ ಮೋಸ ಮಾಡಿದ ತೆನಾಲಿ ರಾಮ



**ಚರ್ಚೆಯ ಅಂಶಗಳು :**

* ತೆನಾಲಿ ರಾಮನ ಪಾತ್ರದ ಪರಿಚಯ – ಅವನ ಬಗ್ಗೆ ಇರುವ ಇತರ ಕಥೆಗಳ ಪರಿಚಯ ಮಾಡಿಕೊಳ್ಳಿ.

* ತೆನಾಲಿ ರಾಮ, ಕೃಷ್ಣದೇವರಾಯರ ವಿಜಯನಗರದ ಪರಿಚಯ ಮಾಡಿಕೊಳ್ಳಿ. ವಿಜಯನಗರದ ಸ್ಥಾಪನೆಯ ಕಥೆ ತಿಳಿಯಿರಿ.

* ಆ ಕಾಲದಲ್ಲೂ ಕಳ್ಳರಿದ್ದರೆ? ಈಗಲೂ ಇದ್ದಾರೆಯೇ? ಕಳ್ಳತನ ಎಂದರೇನು?

* ಬಾವಿಯಲ್ಲಿರುವ ನೀರನ್ನು ಸೇದಿ ಖಾಲಿ ಮಾಡಲು ಸಾಧ್ಯವೇ? ಬಾವಿಯಲ್ಲಿ ನೀರು ಹೇಗೆ ಸೇರುತ್ತದೆ?

* ನೀರು ನಮಗೆ ಎಲ್ಲೆಲ್ಲಿಂದ ಸಿಗುತ್ತದೆ?

* ನೀವು ತೆನಾಲಿ ರಾಮನಾಗಿದ್ದರೆ ಏನು ಮಾಡುತ್ತಿದ್ದೀರಿ? ಕಳ್ಳರಾಗಿದ್ದರೆ ಏನು ಮಾಡುತ್ತಿದ್ದೀರಿ?


* ಕಥೆಯನ್ನು ನಾಟಕ ಮಾಡಬಹುದು.

**ಪ್ರತಿಕ್ರಿಯೆ :**

* ತೆನಾಲಿ ರಾಮ ಒಳ್ಳೆಯವನು. ಅವನು 'ಮೋಸ ಮಾಡಲ್ಲ'.

* ಕಳ್ಳರಿಗೆ 'ಬುದ್ಧಿ' ಕಲಿಸಿದ ಅಂತ ಹೆಸರು ಇರಬೇಕಾಗಿತ್ತು.

# ಕಳ್ಳರಿಗೆ ಮೋಸ ಮಾಡಿದ ತೆನಾಲಿ ರಾಮ




# ದುಡಿಮೆಯ ಫಲ

**ಚರ್ಚೆಯ ಅಂಶಗಳು :**

* ಎಲ್ಲ ತಂದೆ ತಾಯಿಗಳಿಗೆ ಮಕ್ಕಳ ಮೇಲೆ ಕಾಳಜಿ ಇದೆಯೇ?
* ನಮಗೆ ಎಷ್ಟು ಹಣದ ಅಗತ್ಯವಿದೆ? ಅದಕ್ಕಿಂತ ಹೆಚ್ಚು ಹಣ ಬೇಕೆನಿಸಿದರೆ ಅದು ದುರಾಸೆಯೇ?
* ಸೋಮಾರಿತನದಿಂದ ಏನಾಗುತ್ತದೆ?
* ಸಂತೋಷವಾಗಿ ದುಡಿಯಬಹುದೇ?
* ವ್ಯವಸಾಯದ ಬೇರೆ ಬೇರೆ ಹಂತಗಳು ಯಾವುವು?
* ಆಸಕ್ತಿಯಿರುವ ಜನರಿಗೂ ಕೆಲಸ ಏಕೆ ಸಿಗುವುದಿಲ್ಲ?
* ನಮ್ಮ ದೇಶದಲ್ಲಿ 111 ಮಿಲಿಯನ್ ಮಕ್ಕಳಿಗೆ ಕೆಲಸ ಇದೆ. ಆದರೆ ಲಕ್ಷಾಂತರ ಹಿರಿಯರಿಗೆ ಕೆಲಸ ಸಿಗುತ್ತಿಲ್ಲ? ಈ ವಿಚಿತ್ರ ಯಾಕಿರಬಹುದು?
* ಕಥೆಯನ್ನು ನಾಟಕ ಮಾಡಿ.



# ದುಡಿಮೆಯ ಫಲ


ರೈತನೊಬ್ಬ ಸಾಯುವುದಕ್ಕೆ ಮುಂಚೆ ತನ್ನ ಸೋಮಾರಿ ಮಕ್ಕಳನ್ನು ಕರೆದು,
ಹೊಲದ ತುಂಬ ಹಣ ಹೂತಿಟ್ಟಿದ್ದೇನೆ. ಅದನ್ನು ಅಗೆದಾಗ ಬೀಜ ಬಿತ್ತುವುದು ಮರೆಯಬೇಡಿ.
ಎಷ್ಟೇ ಅಗೆದರೂ ಹಣ ಸಿಗಲಿಲ್ಲ.
ಆದರೂ ತಂದೆ ಹೇಳಿದಂತೆ ಬೀಜ ಬಿತ್ತಿದರು.
ಒಳ್ಳೆ ಬೆಳೆ ಬೆಳೆದರು.
ರಾಶಿ ರಾಶಿ ಕಾಳು ಸಿಕ್ಕಿತು.
ಅದನ್ನು ಮಾರಿ ದುಡ್ಡು ಸಿಕ್ಕಾಗ ಅವರಿಗೆ ತಂದೆ ಮಾತು ಅರ್ಥವಾಯಿತು.

# ಜಂಭದ ಕೋಳಿಗೆ ಗೋಳಾಯ್ತು


ಚರ್ಚೆಯ ಅಂಶಗಳು :

* ಸಾಮಾನ್ಯವಾಗಿ ಕಥೆಗಳಲ್ಲಿ ಪ್ರಾಣಿಗಳಿಗೆ ಕೆಲವು ಮನುಷ್ಯರ ಸ್ವಭಾವವನ್ನು ಸೂಚಿಸುತ್ತಾರೆ. ಉದಾಹರಣೆಗೆ ಸಿಂಹ – ಧೈರ್ಯವಂತ, ನವಿಲು – ಜಂಭಗಾರ. ಯಾಕಿರಬಹುದು? ನಿಮಗೆ ಹೆಚ್ಚಿನ ಉದಾಹರಣೆ ಗೊತ್ತಿದ್ದರೆ ಪಟ್ಟಿ ಮಾಡಿ, ಚರ್ಚಿಸಿ.


* ಜಂಭ ಎಂದರೇನು? ಹೆಮ್ಮೆ ಎಂದರೇನು? ಯಾವುದು ಹೆಚ್ಚು ಒಳ್ಳೆಯದು?

* ನಿಧಾನವಾಗಿಯಾದರೂ ಒಂದೇ ಗತಿಯಲ್ಲಿ ಕೆಲಸ ಮಾಡಿದ್ದು ಆಮೆಯನ್ನು ಗೆಲ್ಲಿಸಿತು. ಎಲ್ಲಾ ಸಂದರ್ಭಕ್ಕೂ ಇದು ಸರಿಹೋಗುತ್ತದೆಯೇ?

* ಕಥೆಯನ್ನು ನಾಟಕ ಮಾಡಿ.



# ಜಂಭದ ಕೋಳಿಗೆ ಗೋಳಾಯ್ತು


ನನ್ನಷ್ಟು ಜೋರಾಗಿ ಯಾರೂ ಓಡಲ್ಲ.
ಪಂದ್ಯ ಕಟ್ಟೋಣ, ನಾನೇ ನಿನ್ನನ್ನ ಸೋಲಿಸಬಹುದು.
ಜಿಗಿದು ಓಡೋ ನನಗೆ, ನೀನು ಸಮಾನಾ?
ಇನ್ನೂ ದೂರ ಇದ್ದಾನೆ. ಗೆಲ್ಲೋದು ನಾನೇ. ಸ್ವಲ್ಪ ಮಲಗುತ್ತೇನೆ.
ಆಹಾ! ಮೊಲ, ಮಲಗಿರು. ನಿಧಾನ ಆದರೂ ನಾನು ನಡೀತಾ ಇರ್ತೀನಿ.
ಎಷ್ಟು ಹೊತ್ತು ಮಲಗಿಬಿಟ್ಟನೋ, ಛೆ ಅನ್ಯಾಯ.
ಗೆದ್ದೇಬಿಟ್ಟೆ, ಈಗಲಾದರೂ ಮೊಲ ಬುದ್ಧಿ ಕಲೀಲಿ.

# ಸತ್ಯಕ್ಕೆ ಜಯ

ಚರ್ಚೆಯ ಅಂಶಗಳು :

* ಸಸ್ಯಹಾರಿ ಮತ್ತು ಮಾಂಸಹಾರಿ ಪ್ರಾಣಿಗಳು ಯಾವುವು?
* ತಾಯಿ ಮಕ್ಕಳ ಪ್ರೀತಿ ಪ್ರಾಣಿ ವರ್ಗದಲ್ಲೂ ಕಂಡುಬರುತ್ತದೆಯೇ?
* 'ಕೊಟ್ಟ ಮಾತಿಗೆ ತಪ್ಪುವುದಿಲ್ಲ' – ನಮ್ಮ ದೇಶದಲ್ಲಿ ಈ ಅಂಶಕ್ಕೆ ಎಷ್ಟು ಬೆಲೆ ಇದೆ?
* ಈ ಅಂಶವನ್ನು ಎತ್ತಿ ಹಿಡಿವ ಬೇರೆ ಕಥೆಗಳ ಪರಿಚಯ ಮಾಡಿಕೊಳ್ಳಿ.
* ಹಸು ಹುಲ್ಲು ತಿಂದರೆ ತಪ್ಪಲ್ಲ, ಹುಲಿ ಹಸು ತಿಂದರೆ ತಪ್ಪೇ?
* ಹಸಿವಿಗಾಗಿ ಕೊಲ್ಲುವುದಕ್ಕೂ, ಯುದ್ಧಗಳಲ್ಲಿ ಕೊಲ್ಲುವುದಕ್ಕೂ ವ್ಯತ್ಯಾಸವಿದೆಯೇ?
* ನಿಮ್ಮ ಅಭಿಪ್ರಾಯದಲ್ಲಿ ಕಥೆಯ ನಾಯಕಿ/ನಾಯಕ ಯಾರು?
* 'ಧರಣಿ ಮಂಡಲ ಮಧ್ಯದೊಳಗೆ' ಹಾಡಿನ ಪರಿಚಯ ಮಾಡಿಕೊಳ್ಳಿ.
* ಕಥೆಯನ್ನು ನಾಟಕ ಮಾಡಿ.





# ಸತ್ಯಕ್ಕೆ ಜಯ




ಕಾಡಿನಿಂದ ಮನೆಗೆ ಬರುತ್ತಿದ್ದ ಪುಣ್ಯಕೋಟಿ ಹಸು, ಹುಲಿಯ ಕಣ್ಣಿಗೆ ಬಿತ್ತು.
ಹಸಿದ ಹೊಟ್ಟೆಗೆ ರುಚಿಯಾದ ಊಟ.
ಹುಲಿಯೇ, ಕರು ಕಾಯುತ್ತಿದೆ. ಹಾಲು ಕುಡಿಸಿ ತಕ್ಷಣ ವಾಪಸ್ಸಾಗುತ್ತೇನೆ.
ಅಮ್ಮ ಹೋಗಬೇಡ, ನಿನ್ನನ್ನು ಬಿಟ್ಟು ಹೇಗಿರಲಿ?
ಮಗು, ಕೊಟ್ಟ ಭಾಷೆಗೆ ತಪ್ಪಬಾರದು. ನಾನು ಹೋಗಲೇಬೇಕು.
ಇದೋ, ಬಂದಿದ್ದೇನೆ. ನನ್ನನ್ನು ತಿಂದು ಸಂತೋಷಪಡು.
ಇಂತಹ ಸತ್ಯವಂತರನ್ನು ನಾನು ಎಂದೂ ಕಂಡಿಲ್ಲ.
ನಿನ್ನನ್ನು ಕೊಲ್ಲುವುದು ಬಹಳ ಅನ್ಯಾಯ. ನಾನೇ ಸಾಯುವುದು ಒಳ್ಳೆಯದು.
ಮರಳಿ ಬಂದ ತಾಯಿಯನ್ನು ಕಂಡ ಕರುವಿಗೆ ಸಂತೋಷವೋ ಸಂತೋಷ.

# ಆಪತ್ತಿಗಾದ ಸ್ನೇಹ


ಚರ್ಚೆಯ ಅಂಶಗಳು :

* ನೀರಿನಲ್ಲಿ ಬದುಕುವ ಮತ್ತು ಹಾರಾಡುವ ಜೀವಿಗಳ ಪರಿಚಯ ಮಾಡಿಕೊಳ್ಳಿ.
* ಸ್ನೇಹದ ಮಹತ್ವದ ಬಗ್ಗೆ ಅನೇಕ ಕಥೆಗಳಿವೆ. ಅವುಗಳ ಪರಿಚಯ ಮಾಡಿಕೊಳ್ಳಿ.
* ಕಷ್ಟದಲ್ಲಿರುವವರನ್ನು, ಅಪಾಯದಲ್ಲಿರುವವರನ್ನು ಕಂಡಾಗ ಸಹಾಯ ಮಾಡಲು ಮುನ್ನುಗ್ಗುವ ಸ್ವಭಾವದ ಬಗ್ಗೆ ನಿಮಗೆ ಏನನ್ನಿಸುತ್ತದೆ?
* ಫಲ ದೊರಕಲಿ ಎಂದೇ ಉಪಕಾರ ಮಾಡಬೇಕೆ?
* ಬೇಟೆಯಾಡುವುದು ತಪ್ಪೇ, ಸರಿಯೇ?
* ಬೇಟೆಯನ್ನು ಈಗ ಸರ್ಕಾರ ಏಕೆ ನಿಷೇಧಿಸಿದೆ?
* ಊಟಕ್ಕೆ ಮಾಂಸ ಎಲ್ಲೆಲ್ಲಿಂದ ಸಿಗುತ್ತದೆ?
* ಕಥೆಯನ್ನು ನಾಟಕ ಮಾಡಿ.




# ಆಪತ್ತಿಗಾದ ಸ್ನೇಹ


ಇರುವೆಯೊಂದು ನೀರು ಕುಡಿಯಲು ಬಗ್ಗಿದಾಗ ನದಿಯಲ್ಲಿ ಬಿದ್ದು, ಒದ್ದಾಡುತ್ತಿತ್ತು.




ಇದನ್ನು ಕಂಡ ಹಕ್ಕಿಯೊಂದು ಇರುವೆಯನ್ನು ಕಾಪಾಡಲು ಉಪಾಯ ಮಾಡಿತು.



ಇರುವೆ ಪಾರಾಯಿತು.




ಅಷ್ಟರಲ್ಲಿ, ಬೇಡನೊಬ್ಬ ಹಕ್ಕಿಯನ್ನು ಕೊಲ್ಲಲು ತಯಾರಾದ.



ಇದನ್ನು ಕಂಡ ಇರುವೆ ಬೇಡನನ್ನು ಕಚ್ಚಿತು. ಬಾಣ ಗುರಿತಪ್ಪಿ, ಹಕ್ಕಿ ಉಳಿಯಿತು.



ಇರುವೆ ಮತ್ತು ಹಕ್ಕಿ ಸ್ನೇಹಿತರಾದವು.




# ಮೂರ್ತಿ ಪುಟ್ಟದಾದರೂ ಸಹಾಯ ದೊಡ್ಡದು

**ಚರ್ಚೆಯ ಅಂಶಗಳು :**

* ಪ್ರಕೃತಿಯಲ್ಲಿ ಎಲ್ಲ ಪ್ರಾಣಿಗಳಿಗೂ ತನ್ನದೇ ಆದ ಸ್ಥಾನವಿದೆ, ಪ್ರಾಮುಖ್ಯತೆ ಇದೆ. ಈ ಬಗ್ಗೆ ಚರ್ಚೆ ಮಾಡಿ.
* ಸಿಂಹದ ಹಲ್ಲುಗಳಿಗೆ ಬಲೆ ಕಡಿಯಲು ಆಗಲಿಲ್ಲ. ಹಲ್ಲಿನ ರಚನೆಯಂತೆ ಪ್ರಾಣಿಗಳಲ್ಲಿ ಅವುಗಳ ಆಹಾರಕ್ಕೆ, ಜೀವನಕ್ಕೆ ತಕ್ಕಂತೆ ದೇಹದ ಭಾಗಗಳ ರಚನೆ ಆಗಿರುತ್ತದೆ. ಅದರ ಬಗ್ಗೆ ಹೆಚ್ಚು ತಿಳಿಯಿರಿ.
* ಸ್ನೇಹ, ಸಹಾಯವನ್ನು ಎತ್ತಿ ಹಿಡಿಯುವ ಬೇರೆ ಕಥೆಗಳ ಪರಿಚಯ ಮಾಡಿಕೊಳ್ಳಿ.



# ಪಾಲಿಗೆ ಬಂದದ್ದು



ಗೆಳೆಯಾ, ನಾವಿಬ್ಬರೂ ಜೊತೆ ಸೇರಿ ವ್ಯವಸಾಯ ಮಾಡೋಣವಾ?
ಸರಿ, ಬೆಳೆಯಲ್ಲಿ ಇಬ್ಬರಿಗೂ ಸಮಪಾಲು.
ಒಹೋ, ಮೇಲೆ ಬೆಳೆದದ್ದು ನಿನಗೆ, ನೆಲದೊಳಗಿನದು ನನಗೆ.
ಒಳ್ಳೇ ಆಲೂಗಡ್ಡೆ ಬೆಳೆ. ಬಾ, ಪಾಲು ಮಾಡೋಣ.
ಇದೇನು ಅನ್ಯಾಯ!
ಹೋಗಲಿ ಬಿಡು, ಮುಂದಿನ ಬಾರಿ ನೆಲದಲ್ಲಿ ಬೆಳೆದದ್ದು ನೀನೇ ಇಟ್ಟುಕೋ.
ನಾನು ಹೇಳಿದ ಹಾಗೆ ಜೋಳ ಬೆಳೆದದ್ದು ಎಷ್ಟು ಒಳ್ಳೇದಾಯ್ತು.
ಛೀ! ನಿನ್ನಂತಹ ಮೋಸಗಾರನ ಸಹವಾಸ ನನಗೆ ಬೇಡವೇ ಬೇಡ.

# ಮಣ್ಣು ಮುಕ್ಕಿದ ಜಾದೂಗಾರ

**ಚರ್ಚೆಯ ಅಂಶಗಳು :**

* ವಿಜಯನಗರದ ಇತಿಹಾಸ ಹಾಗೂ ಕೃಷ್ಣದೇವರಾಯನ ಬಗ್ಗೆ ಚರ್ಚಿಸಿ.
* ಕಲೆಗಳು ಎಂದರೇನು?
* ಜಾದೂ ಎಂದರೇನು? ನೀವು ನೋಡಿರುವ ಜಾದೂಗಳ ಪಟ್ಟಿ ಮಾಡಿರಿ.
* ಜಾದೂವಿನಿಂದ, ಕಣ್ಣುಕಟ್ಟಿನಿಂದ ಮಾಡಬಹುದಾದ ಮೋಸಗಳ ಬಗ್ಗೆ ಚರ್ಚಿಸಿ.
* ಜಂಭ ಪಡುವುದು ಒಳ್ಳೆಯದೇ?
* ಬುದ್ಧಿವಂತಿಕೆಯಿಂದ ಕೆಲಸ ಸಾಧಿಸುವುದು ಎಂದರೇನು?
* ತೆನಾಲಿ ರಾಮಕೃಷ್ಣನ ಪ್ರದರ್ಶನ ಜಾದೂವೇ?




ಮಣ್ಣು ಮುಕ್ಕಿದ ಜಾದೂಗಾರ
ವಿಜಯನಗರದ ಪ್ರಸಿದ್ಧ ದೊರೆ ಶ್ರೀ ಕೃಷ್ಣದೇವರಾಯ ಎಲ್ಲಾ ವಿಧದ ಕಲೆಗಳನ್ನು ತುಂಬಾ ಪ್ರೋತ್ಸಾಹಿಸುತ್ತಿದ್ದ.
ನೋಡಿ, ನನ್ನ ಜಾದೂವಿನ ಚಮತ್ಕಾರ! ಡಬ್ಬ ಖಾಲಿ ತಾನೇ?
ಹಾ! ಹೂ! ಛೂ ಮಂತ್ರ ..... ಈಗ ನೋಡಿ!
ಹೀಗೆ ಅನೇಕ ಚಮತ್ಕಾರಗಳ ನಂತರ .....
ನನ್ನನ್ನು ಮೀರಿಸುವವರು ಯಾರಿದ್ದಾರೆ, ನನ್ನ ಕೈಲಾಗದ್ದು ಏನಿದೆ?
ನಾನು ಕಣ್ಣು ಮುಚ್ಚಿ ಮಾಡುವುದನ್ನು ನೀವು ಕಣ್ಣು ತೆರೆದೂ ಮಾಡಲಾಗುವುದಿಲ್ಲ.
ಯಾಕಾಗುವುದಿಲ್ಲ, ನೋಡೇ ಬಿಡೋಣ!
ತೆನಾಲಿ ರಾಮ ಮರಳು ತರಿಸಿ, ಕಣ್ಣು ಮುಚ್ಚಿ ಬೊಗಸೆ ಮರಳು ಮುಖದ ಮೇಲೆ ಸುರಿದುಕೊಂಡ.
ಸೋತೆಯಾ? ನಿನ್ನ ಕೈಲಿ ಆಗುವುದಿಲ್ಲ ಅಲ್ಲವಾ?

# ಇಲ್ಲಿಂದ ಅಲ್ಲಿಗೆ

**ಚರ್ಚೆಯ ಅಂಶಗಳು :**

* ಅಂಚೆಯ ಡಬ್ಬಿ ಸೇರಿದ ಕಾಗದ ಎಲ್ಲೆಲ್ಲಿ ಹಾದು, ತಲುಪಬೇಕಾದವರನ್ನು ತಲುಪುತ್ತದೆ? ಅದನ್ನು ತಲುಪಿಸುವುದಕ್ಕೆ ಯಾರ್‍ಯಾರು ಸಹಾಯ ಮಾಡುತ್ತಾರೆ?

* ಕೆಲವು ಸಾರಿ ಪತ್ರಗಳು ಸರಿಯಾದ ಸ್ಥಳ ಏಕೆ ತಲುಪುವುದಿಲ್ಲ? (ಉದಾಹರಣೆ : ವಿಳಾಸ ತಪ್ಪಿರಬಹುದು, ಅಂಚೆ ಚೀಟಿ ಸಾಕಷ್ಟು ಇಲ್ಲದಿರಬಹುದು.)

* ಸುದ್ದಿಯನ್ನು ಒಂದು ಸ್ಥಳದಿಂದ ಇನ್ನೊಂದಕ್ಕೆ ತಲುಪಿಸುವ ಬೇರೆ ವಿಧಾನಗಳು, ಯಂತ್ರಗಳು ಯಾವುವು? (ಉದಾಹರಣೆ ರೇಡಿಯೋ, ದೂರದರ್ಶನ, ದಿನಪತ್ರಿಕೆ, ತಂತಿ, ದೂರವಾಣಿ, ಉಪಗ್ರಹ ಇತ್ಯಾದಿ)

* ಚಿತ್ರ, ಕಥೆ, ನಾಟಕ ಹಾಗೂ ಹಾಡುಗಳ ಮೂಲಕವೂ ವಿಷಯ ಹರಡಬಹುದು ಎಂಬುದರ ಬಗ್ಗೆ ಚರ್ಚಿಸಿ.

* ಸಾಧ್ಯವಾದರೆ ಅಂಚೆ ವ್ಯವಸ್ಥೆಯು ಬೆಳೆದು ಬಂದ ದಾರಿಯ ಬಗ್ಗೆ ಚರ್ಚಿಸಿ.

* ಮಕ್ಕಳ ಜೊತೆ ಪತ್ರ ಬರೆಯುವ ಆಟ, ನಮಗೂ ಬರೆದು ಪುಸ್ತಕ ಇಷ್ಟವಾಯಿತೇ ತಿಳಿಸಿ.



# 'ಬೆಂಗಳೂರು' – ಈ ಹೆಸರಿನ ಬಗ್ಗೆ ಹೀಗೊಂದು ಕಥೆ




## ಜಾಣ ಬೀರಬಲ್

ಚರ್ಚೆಯ ಅಂಶಗಳು :

* ಭಾರತದಲ್ಲಿ ಮೊಗಲರ ಆಳ್ವಿಕೆಯ, ಅದರಲ್ಲೂ ಅಕ್ಬರ್‌ನ ಪ್ರಾಮುಖ್ಯತೆಯ ಪರಿಚಯ ಮಾಡಿಕೊಳ್ಳಿ. ವಿಶೇಷವಾಗಿ ಹಿಂದೂ ಹಾಗೂ ಮುಸಲ್ಮಾನರನ್ನು ಸಮವಾಗಿ ಕಂಡ ಅವನ ಆಡಳಿತದ ಬಗ್ಗೆ ತಿಳಿಯಿರಿ.
* ಹಿಂದಿನ ಕಾಲದ ಶಿಕ್ಷೆಯ ಕ್ರಮಗಳು ಯಾವುವು? ಈಗಿನವು ಯಾವುವು?
* ಶಿಕ್ಷೆ ಕೊಡಬೇಕೆಂದು ತೀರ್ಮಾನಿಸುವವರು ಯಾರು?
* ನ್ಯಾಯಾಲಯದ ಪಾತ್ರದ ಬಗ್ಗೆ ಚರ್ಚಿಸಿ
* ಮರಣದಂಡನೆ ಇರಬೇಕೇ? ಬೇಡವೆ?
* ಕಥೆಯನ್ನು ನಾಟಕ ಮಾಡಿ.





# ಜಾಣ ಬೀರಬಲ್


ದಿಲ್ಲಿಯಲ್ಲಿ ಆಳುತ್ತಿದ್ದ ಮೊಗಲ್ ರಾಜ ಅಕ್ಬರ್ ದರ್ಬಾರಿನಲ್ಲಿ ಬೀರಬಲ್ ಮತ್ತು ಇತರ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳಿದ.
ನನ್ನ ಗಡ್ಡ ಎಳೆದವರಿಗೆ ಏನು ಶಿಕ್ಷೆ ಕೊಡಬೇಕು?
ಆ ದುಷ್ಟನ ತಲೆ ಬೋಳಿಸಿ, ಕತ್ತೆಯ ಮೇಲೆ ಊರೆಲ್ಲಾ ಮೆರವಣಿಗೆ ಮಾಡಬೇಕು.
ಆ ದುರಹಂಕಾರಿಯನ್ನು ರಾಜ್ಯದಿಂದ ಓಡಿಸಬೇಕು.
ಇಲ್ಲ! ಇಲ್ಲ! ಅಂತಹ ತಪ್ಪಿಗೆ ಮರಣದಂಡನೆಯೇ ತಕ್ಕ ಶಿಕ್ಷೆ.
ಬೀರಬಲ್, ನಿನ್ನ ಅಭಿಪ್ರಾಯವೇನು?
ಪ್ರಭು, ಆ ತುಂಟನಿಗೆ ಮಿಠಾಯಿ ಕೊಟ್ಟು ಮುದ್ದಾಡಬೇಕು.
ಇದೆಂತಹ ಶಿಕ್ಷೆ ಬೀರಬಲ್?
ನಿಮ್ಮ ಗಡ್ಡ ಎಳೆಯುವ ಧೈರ್ಯ ನಿಮ್ಮ ಪುಟ್ಟ ಮಗನಿಗಲ್ಲದೆ ಯಾರಿಗೆ ಇದೆ?

# ಮೊದ್ದುಮಣಿ

**ಚರ್ಚೆಯ ಅಂಶಗಳು :**

* ಮೊದ್ದುಮಣಿ ಸೋಮಾರಿಯಾ ಅಥವಾ ಪೆದ್ದನ?

* ಹಗಲು, ರಾತ್ರಿ, ಸಮಯ – ಇವುಗಳ ಕಲ್ಪನೆ ಸೂರ್ಯನ ಚಲನೆಯಿಂದ ಇರುವ ಜಾಗದಿಂದ ಗೊತ್ತಾಗುತ್ತದಾ? ಕಥೆಯಲ್ಲಿ ಅದು ಹೇಗೆ ತಿಳಿಯುತ್ತದೆ?

* ಬೆಣ್ಣೆ ಬಿಸಿಲಿನಲ್ಲಿ ಯಾಕೆ ಕರಗುತ್ತದೆ, ನೀರಿನಲ್ಲಿಟ್ಟರೆ ಯಾಕೆ ಕರಗುವುದಿಲ್ಲ. ಉಪ್ಪು ಯಾಕೆ ಬಿಸಿಲಿನಲ್ಲೂ, ನೀರಿನಲ್ಲೂ ಕರಗುತ್ತದೆ?

* ಬೇರೆ ಬೇರೆ ವಸ್ತುಗಳ ಗುಣಲಕ್ಷಣಗಳ ಬಗ್ಗೆ ಕಂಡುಹಿಡಿಯಿರಿ, ತಿಳಿಯಿರಿ.

* ಕಥೆಯನ್ನು ನಾಟಕ ಮಾಡಿ.





# ಮೊದ್ದುಮಣಿ



ಗುಂಡಾ, ಯಾವಾಗಲೂ ಮಲಗಿರುವುದೇ, ಸೋಮಾರಿ! ಅಂಗಡಿಗೆ ಹೋಗಿ ಸ್ವಲ್ಪ ಬೆಣ್ಣೆ ತಾ.
ಅಯ್ಯಯ್ಯೋ, ಬೆಣ್ಣೆ ನೀರಿನಲ್ಲಿಟ್ಟು ತರಬೇಕಾಗಿತ್ತೊ. ಹೋಗಲಿ, ಉಪ್ಪು ಕೊಂಡು ಬಾ.
ಉಪ್ಪು ಕರಗಿ ಹೋಗಿದೆಯಲ್ಲ, ಚೀಲದಲ್ಲಿ ತರಬೇಕಿತ್ತು. ನಿನಗೆ ಬುದ್ಧಿ ಯಾವತ್ತು ಬರುತ್ತೋ! ಮಾವನ ಮನೆಯಿಂದ ನಾಯಿ ತಾ.
ಅಜ್ಜಿ ನೋಡು!
ಮಂಕೆ, ನಾಯಿಗೆ ದಾರ ಕಟ್ಟಿ ತರಬೇಕಾಗಿತ್ತು. ಗಿರಣಿಯಿಂದ ಹಿಟ್ಟು ತಾ.
ಛೇ, ಹಿಟ್ಟೆಲ್ಲಾ ಬೀದಿಪಾಲು. ಬೆನ್ನ ಮೇಲೆ ತರಲು ತಿಳಿಯದಾ? ಕರು ಮೇವಿಗೆ ಹೋಗಿದೆ. ವಾಪಸ್ಸು ತಾ.
ಥೂ, ಮೊದ್ದ, ನಿನ್ನ ಹತ್ತಿರ ನನಗೆ ಸಾಕಾಯ್ತು. ಪೆದ್ದ, ಹೋಗಿ ಮಲಗು, ಅದೇ ಸರಿ ನಿನಗೆ!

## ತೋಳ ಬಂತು ತೋಳ

ಚರ್ಚೆಯ ಅಂಶಗಳು :

* ಕುರಿ, ಹಸುವಿನಂತಹ ಪ್ರಾಣಿಗಳನ್ನು ಯಾಕೆ ಸಾಕುತ್ತೇವೆ?

* ಸಾಕುಪ್ರಾಣಿಗಳಿಗೂ ಕಾಡುಪ್ರಾಣಿಗಳಿಗೂ ಇರುವ ವ್ಯತ್ಯಾಸವೇನು? ಅವುಗಳ ಹೆಸರುಗಳನ್ನು, ಚಿತ್ರಗಳನ್ನು ಬರೆದು ಸಂಗ್ರಹಿಸಿ.

* ಬೇಜಾರು ಆಗದಿರುವಂತೆ ಕಾಲ ಕಳೆಯಲು ಸೋಮ ಬೇರೆ ಏನು ಮಾಡಬಹುದಿತ್ತು?

* 'ಕಾಪಾಡಿ' ಎಂದು ಕೂಗಿದಾಗ, ಹಳ್ಳಿ, ಪಟ್ಟಣಗಳಲ್ಲಿ ಯಾವ ರೀತಿಯ ಸಹಾಯ ಸಿಗಬಹುದು?

* 'ತೋಳ ಬಂತು ತೋಳ' ಎನ್ನುವುದು ಪೊಳ್ಳು ಬೆದರಿಕೆಯ ಮಾತಾಗಿ ಕನ್ನಡ ಭಾಷೆಯಲ್ಲಿ ಸೇರಿಕೊಂಡಿದೆ. ಅದೇ ರೀತಿಯ ಬೇರೆ ಕಥೆಗಳು ಇವೆ. ಉದಾಹರಣೆ : 'ಎಟುಕಲಾರದ ದ್ರಾಕ್ಷಿ ಹುಳಿ' ಕಥೆಯನ್ನು ಓದಿ.


* ಕಥೆಯನ್ನು ನಾಟಕ ಮಾಡಿ.

ಪ್ರತಿಕ್ರಿಯೆ :

* ನಾವು ಒಂದು ಸಾರಿ ಕಷ್ಟದಲ್ಲಿದ್ದರೆ ಜನ ಸಹಾಯಕ್ಕೆ ಬರುತ್ತಾರೆ. ಆದರೆ ಮತ್ತೆ ಮತ್ತೆ ಕಷ್ಟ ಆದ್ರೆ ಯಾರು ಬರುತ್ತಾರೆ?




# ತೋಳ ಬಂತು ತೋಳ






CH-100 N93
07169
COMMUNITY HEALTH CELL LIBRARY AND

# ಬೇಸ್ತು ಬಿದ್ದ ಬೇಡ



ಚರ್ಚೆಯ ಅಂಶಗಳು :

* ಗುಂಪಾಗಿ ವಾಸಿಸುವ ಹಕ್ಕಿ/ಪ್ರಾಣಿಗಳು ಯಾವುವು? ಗುಂಪಾಗಿ ವಾಸ ಮಾಡಲು ಕಾರಣವೇನಿರಬಹುದು? ಮನುಷ್ಯ ಏನು ಮಾಡುತ್ತಾನೆ?


* ಬೇಟೆಗಾರರು ಪ್ರಾಣಿಗಳನ್ನು ಯಾವ ಕಾರಣಕ್ಕಾಗಿ ಹಿಡಿಯುತ್ತಿದ್ದರು? ಯಾವ ವಿಧಾನಗಳಿಂದ ಹಿಡಿಯುತ್ತಿದ್ದರು?

* ಈಗ ಹೊಸ ಕಾರಣಗಳಿಗೆ ಬೇಟೆ ಆಡುತ್ತಾರೆಯೇ? ಯಾವ ಕಾರಣಕ್ಕಾಗಿ ಬೇಟೆಯಾಡುತ್ತಾರೆ? ಅದರ ವಿಧಾನಗಳು ಹೆಚ್ಚು ಹೆಚ್ಚು ಭಯಂಕರವಾಗುತ್ತಿರುವ ಬಗ್ಗೆ ಚರ್ಚಿಸಿ.

* ಮನುಷ್ಯರು ವಿವೇಚನೆ ಇಲ್ಲದೆ ಪ್ರಾಣಿ/ಪಕ್ಷಿಗಳನ್ನು ಕೊಲ್ಲುತ್ತಿರುವುದರ ಪರಿಣಾಮ ಏನಾಗಿದೆ? (ಕಾಡು ಪ್ರಾಣಿಗಳ ಸಂತತಿ ಕಡಿಮೆಯಾಗುತ್ತಿದೆ, ಪರಿಸರದಲ್ಲಿ ಸಮತೋಲನ ತಪ್ಪುತ್ತಿದೆ.)

* ಒಂಟಿಯಾಗಿ ಆಗದಿದ್ದರೂ ಗುಂಪಿನಲ್ಲಿ ಕೆಲಸ ಮಾಡುವುದರಿಂದ ಹೆಚ್ಚಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಕೆಲವು ಉದಾಹರಣೆ ಕೊಡಬಲ್ಲಿರಾ? ಈ ಅಂಶದ ಜೊತೆ ಸಂಘಶಕ್ತಿಯ ಬಗ್ಗೆ ಚರ್ಚಿಸಿ.

* ಕಥೆಯನ್ನು ನಾಟಕ ಮಾಡಿ.



# ಬೇಸ್ತು ಬಿದ್ದ ಬೇಡ


ಕಾಡಿನಲ್ಲಿ ಪಾರಿವಾಳಗಳ ಗುಂಪು .....
ಎಷ್ಟೊಂದು ಅಕ್ಕಿ ಕಾಳು!
ಅಬ್ಬ! ಇವತ್ತು ಊಟಕ್ಕೆ ಕಷ್ಟಪಡಬೇಕಾಗಿಲ್ಲ.
ನಿಲ್ಲಿ! ಕಾಡಿನ ಮಧ್ಯ ಅಕ್ಕಿ! ಇದರಲ್ಲಿ ಏನೋ ಮೋಸ ಇದೆ.
ಎಷ್ಟು ಅವಸರ ನಿಮಗೆ!
ನಮ್ಮನ್ನು ಬಿಡಿಸುವ ಉಪಾಯ ಹುಡುಕು.
ನನ್ನ ಉಪಾಯಕ್ಕೆ ನಿಮ್ಮೆಲ್ಲರ ಶಕ್ತಿ ಬೇಕು. ಎಲ್ಲರೂ ಸೇರಿ ಬಲೆ ಎತ್ತೋಣ. ಹೂಂ! ಬೇಗ!
ಈಗ ನನ್ನ ಗೆಳೆಯ ಇಲಿಯ ಹತ್ತಿರ ಹೋಗಿ ಸಹಾಯ ಕೇಳೋಣ.
ಸದ್ಯ ಬದುಕಿದೆವು!

# ಮೈಗಳ್ಳನಿಗೆ ಗೋಳಾಯ್ತು

**ಚರ್ಚೆಯ ಅಂಶಗಳು :**

* ಕಷ್ಟಪಟ್ಟರೆ ಮಾತ್ರ, ಫಲ ಅನುಭವಿಸುವ ಹಕ್ಕು ಎನ್ನುವುದು ಸರಿಯೇ?

* ಹುಂಜ ಎಲ್ಲಿ ಹೋಗಿರಬಹುದು?

* ಮನುಷ್ಯರಲ್ಲಿರುವಂತೆ ಪ್ರಾಣಿಗಳಲ್ಲೂ ಅಡಿಗೆ, ಮನೆಗೆಲಸ ಮತ್ತು ಮಕ್ಕಳ ಜವಾಬ್ದಾರಿ ಹೆಣ್ಣಿಗೆ ಮಾತ್ರವೇ? ಮನೆ ಕೆಲಸದಲ್ಲಿ, ಮಕ್ಕಳನ್ನು ಸಾಕುವುದರಲ್ಲಿ ಗಂಡಸರ ಜವಾಬ್ದಾರಿ ಏನು?


* ಕಥೆಗಳಲ್ಲಿ ಪ್ರಾಣಿಗಳನ್ನು ಮನುಷ್ಯರಿಗೆ ಹೋಲಿಸುವುದು ಏನು ಅನ್ನಿಸುತ್ತದೆ? (ಉದಾಹರಣೆ : ಕಾಳು ಬೇಸುವುದು, ರೊಟ್ಟಿ ತಟ್ಟುವುದು, ಕೋಳಿಗಳ ಅಭ್ಯಾಸವಲ್ಲ, ಅವು ಹಸಿ ಕಾಳನ್ನು ತಿನ್ನುತ್ತವೆ.)

* ಮೊಟ್ಟೆ ಮೊದಲು ಬಂತೋ, ಕೋಳಿ ಮೊದಲು ಬಂತೋ?

* ಕಥೆಯನ್ನು ನಾಟಕ ಮಾಡಿ.



# ಮೈಗಳ್ಳನಿಗೆ ಗೋಳಾಯ್ತು


ಬನ್ನಿ, ನಾವೆಲ್ಲರೂ ಸೇರಿ ತೆನೆ ಬಿಡಿಸೋಣ.
ಗೋಧಿಯನ್ನೆಲ್ಲಾ ಸ್ವಚ್ಛ ಮಾಡೋಣ.
ಈಗ ಬೀಸಿ ಹಿಟ್ಟು ಮಾಡೋಣ.
ಬಾರೋ ಸೋಮಾರಿ, ನೀನೂ ಸಹಾಯ ಮಾಡು.
ರೊಟ್ಟಿಯಾಯಿತು, ಊಟಕ್ಕೆ ಬನ್ನಿ.
ನೀನು ನಮ್ಮ ಜೊತೆ ಕೆಲಸ ಹಂಚಿಕೊಳ್ಳಲಿಲ್ಲ.
ನಿನಗೆ ರೊಟ್ಟಿಯಲ್ಲಿ ಪಾಲಿಲ್ಲ!

# ಪಾಲಿಗೆ ಬಂದದ್ದು

**ಚರ್ಚೆಯ ಅಂಶಗಳು :**

* ನೆಲದೊಳಗೆ ಬೆಳೆಯುವ ಮತ್ತು ನೆಲದ ಮೇಲೆ ಬೆಳೆಯುವ ಬೆಳೆಗಳ ಪಟ್ಟಿ ಮಾಡಿರಿ.

* ಕಥೆಯಲ್ಲಿ ನರಿ ಇಷ್ಟವಾಯ್ತೋ ಅಥವಾ ಕರಡಿಯೋ? ಯಾಕೆ?

* ಎಲ್ಲಾ ಕತೆಗಳಲ್ಲೂ ನರಿಯನ್ನು ಸೋಮಾರಿ, ಬುದ್ಧಿವಂತನಾಗಿ ಚಿತ್ರಿಸುವ ಕಾರಣ ಏನಿರಬಹುದು? (ಒಂದು ಸಾಧ್ಯತೆ, ಅದು ಬೇರೆ ಪ್ರಾಣಿಗಳು ಬೇಟೆ ಮಾಡಿ ತಿಂದು ಬಿಟ್ಟಿದ್ದನ್ನು ತಿನ್ನುತ್ತದೆ, ಸ್ವತಃ ಕಷ್ಟಪಡುವುದು ಬಹಳ ಅಪರೂಪ.)


* ನಿಮಗೆ ಪಾಲು ಮಾಡಲು ಹೇಳಿದ್ದರೆ ಹೇಗೆ ಮಾಡುತ್ತಿದ್ದೀರಿ?

* ನಮ್ಮ ದಿನನಿತ್ಯ ಜೀವನದಲ್ಲಿ ಕಷ್ಟಪಟ್ಟು ದುಡಿದವರಿಗೆ ತಕ್ಕ ಪಾಲು ಸಿಗುತ್ತದೆಯೇ? ಅಥವಾ ಯಾರು ಲಾಭ ಪಡೆಯುತ್ತಾರೆ?



# ಮೂರ್ತಿ ಪುಟ್ಟದಾದರೂ ಸಹಾಯ ದೊಡ್ಡದು

ನಿದ್ರೆ ಮಾಡುತ್ತಿದ್ದ ಸಿಂಹಕ್ಕೆ ಇಲಿ ಮೈಮೇಲೆ ಹತ್ತಿದಾಗ ಎಚ್ಚರವಾಯಿತು.



ಅದು ಕೋಪದಿಂದ ಇಲಿಯನ್ನು ತಿನ್ನಲು ಹೊರಟಿತು.








ಸ್ವಲ್ಪ ದಿನದ ನಂತರ ಬಲೆಯಲ್ಲಿ ಬಿದ್ದ ಸಿಂಹವನ್ನು ಇಲಿ ನೋಡಿತು. ಅದರ ಸಹಾಯಕ್ಕೆ ಬಂದಿತು.





ಅಂದಿನಿಂದ ಸಿಂಹ ಮತ್ತು ಇಲಿ ಸ್ನೇಹಿತರಾದರು.




## ತುಂಟ ನಾಯಿ

**ಚರ್ಚೆಯ ಅಂಶಗಳು :**

* ಮರಿನಾಯಿ ತುಂಟ ನಾಯಿಯೋ ಅಥವಾ ಕೆಟ್ಟ ನಾಯಿಯೋ?
* ತುಂಟತನದಿಂದ ಬೇರೆಯವರಿಗೆ ತೊಂದರೆ ಆಗಬಹುದೆ?
* ಜಂಭ ಪಡುವುದು ಒಳ್ಳೆಯದೋ, ಕೆಟ್ಟದ್ದೋ?
* ಅಹಂಕಾರ ಕೊನೆಗೆ ಮನುಷ್ಯನ ಸೊಕ್ಕು ಮುರಿಯುತ್ತದೆ. ಚರ್ಚಿಸಿ.
* ನಾಯಿಯ ಬೇರೆ ಗುಣಗಳನ್ನು ಪಟ್ಟಿ ಮಾಡಿ. (ಉದಾ : ನಿಷ್ಠೆ, ಪ್ರೀತಿ)
* ನಾಯಿ ಕಡಿತ ಬಗ್ಗೆ ಚರ್ಚಿಸಿ. ಅದಕ್ಕೆ ಬೇಕಾದ ಚಿಕಿತ್ಸೆ ಬಗ್ಗೆ ತಿಳಿದುಕೊಳ್ಳಿ.
* ನಾಯಿಯ ಬಗ್ಗೆ ಇನ್ನೂ ಹಾಡು, ಕಥೆಗಳನ್ನು ಸಂಗ್ರಹಿಸಿ.



# ತುಂಟ ನಾಯಿ




ಒಂದು ತುಂಟ ನಾಯಿ ನೋಡಿದವರನ್ನೆಲ್ಲಾ ಕಚ್ಚುತ್ತಿತ್ತು.
ಇದನ್ನು ತಪ್ಪಿಸಲು ಯಜಮಾನ ಅದರ ಕೊರಳಿಗೆ ಗಂಟೆ ಕಟ್ಟಿದ.
ನಾಯಿಯ ಗಂಟೆ ಶಬ್ದ ಕೇಳಿದ ಕೂಡಲೇ ಜನ ಓಡಿ ಹೋಗಿ ತಪ್ಪಿಸಿಕೊಳ್ಳುತ್ತಿದ್ದರು.
ಇದು ನಾಯಿಗೆ ಅರ್ಥವಾಗದೆ, ಯಜಮಾನ ತನಗೆ ಗಂಟೆ ಕಟ್ಟಿ ಅಲಂಕರಿಸಿದ್ದಾನೆ ಎಂದು ಜಂಭ ಪಡುತ್ತಿತ್ತು.
ನಾಯಿ ಜಂಭ ಪಡುವುದನ್ನು ಕಂಡ ಮುದಿ ನಾಯಿ ನಕ್ಕು ಹೇಳಿತು.
ಅಯ್ಯೋ ಪೆದ್ದೇ, ನಿನ್ನ ಗಂಟೆ ಅಲಂಕಾರಕಲ್ಲ, ಜನರನ್ನು ಎಚ್ಚರಿಸುವುದಕ್ಕಾಗಿ.
ಗಂಟೆ ಕಟ್ಟಿದ್ದರ ಅರ್ಥ ಗೊತ್ತಾಗಿ ನಾಯಿಗೆ ತುಂಬ ಅವಮಾನವಾಯಿತು.

## ‘ಬೆಂಗಳೂರು’ – ಈ ಹೆಸರಿನ ಬಗ್ಗೆ ಹೀಗೊಂದು ಕಥೆ

**ಚರ್ಚೆಯ ಅಂಶಗಳು :**

* ಈ ಕಥೆ ಚಾರಿತ್ರಿಕವಾಗಿ ಕಂಡರೂ, ಜಾನಪದ. ಬಾಯಿ ಮಾತಿನಿಂದ ಹಬ್ಬುವ, ಇಂತಹ ಕಥೆಗಳು ಪುರಾವೆ ಇಲ್ಲದಿರುವುದರಿಂದ ಪೂರ್ತಿಯಾಗಿ ನಂಬಲು ಸಾಧ್ಯವಿಲ್ಲ.
* ಹಂಚಿ ತಿನ್ನುವುದರಲ್ಲಿ ಸಂತೋಷವಿದೆಯೇ?
* ಇಂದಿನ ಬೆಂಗಳೂರಿನಲ್ಲಿ ದಾರಿ ತಪ್ಪಿದವರಿಗೆ ಏನೇನು ಸಹಾಯ ಸಿಗಬಹುದು?
* ಇದೇ ರೀತಿ ಕಥೆಗಳು ಬೇರೆ ಊರಿನ ಬಗ್ಗೆಯೂ ಇದೆ. ಉದಾ : ‘ಮೈಸೂರು’, ‘ಮಹಿಷಾಸುರನೂರು’. ಅವುಗಳನ್ನೂ ಸಂಗ್ರಹಿಸಿ.
* ಬೇರೆ ಬೇರೆ ಊರುಗಳನ್ನು, ಹಳ್ಳಿಗಳನ್ನು ನಕ್ಷೆಯಲ್ಲಿ ಗುರುತಿಸಲು ಬರುತ್ತದಾ?
* ಹಳ್ಳಿಗಳಿಗೂ, ನಗರಗಳಿಗೂ ವ್ಯತ್ಯಾಸವಿದೆಯೇ?
* ಕಥೆಯನ್ನು ನಾಟಕ ಮಾಡಿ.



# ಇಲ್ಲಿಂದ ಅಲ್ಲಿಗೆ



ನಾವಿಲ್ಲದೆ ಒಬ್ಬರಿಂದ ಒಬ್ಬರಿಗೆ ಸುದ್ದಿ ತಲುಪಲು ಸಾಧ್ಯವೇ ಇಲ್ಲ.
ಹಾಗೇನಿಲ್ಲ.
ಹಿಂದೆ ಜನರೇ ಸ್ವತಃ ಸುದ್ದಿ ತಲುಪಿಸುತ್ತಿರಲಿಲ್ಲವೇ?
ಎಷ್ಟು ದಿನ ಆಗುತ್ತಾ ಇತ್ತೋ!
ಆಫ್ರಿಕಾದಂತ ದೇಶಗಳಲ್ಲಿ ನಗಾರಿ ಸದ್ದಿನಿಂದಲೂ ಸಂದೇಶ ಕಳಿಸುತ್ತಿದ್ದರು.
ಓ, ಟೆಲಿಫೋನ್ ತರಹ!
ಹೊಗೆಯಿಂದಲೂ ಕೆಲವು ಸಮಾಚಾರ ಹರಡುತ್ತಿದ್ದರಂತೆ, ಅಮೇರಿಕಾದ ಮೂಲ ಜನರು!
ನೀನು ಕೇಳಿಲ್ಲವಾ? ಕೆಲವು ಕಥೆಗಳಲ್ಲಿ ಹಕ್ಕಿಗಳಿಗೂ ತರಬೇತಿ ಕೊಟ್ಟು ಪತ್ರ ಕಳುಸುತ್ತಿದ್ದುದ್ದು!
ಈಗಿನ ಅಂಚೆ ವ್ಯವಸ್ಥೆ ಬರೀ 150 ವರ್ಷಗಳ ಹಿಂದೆ ಯುರೋಪಿನಲ್ಲಿ ಶುರುವಾಗಿದ್ದು.
POST
ಅಂಚೆ

# ನಿಜದ ತಲೆಯ ಮೇಲೆ ಹೊಡೆದ ಹಾಗೆ

**ಚರ್ಚೆಯ ಅಂಶಗಳು :**

* ಮರದ ಕೆಳಗೆ ಕುಳಿತವರು ಏನು ಮಾಡುತ್ತಿದ್ದಾರೆ?

* ಕುಳಿತು ಆಡುವ ಆಟಗಳು ನಿಮಗೆ ಗೊತ್ತಿದೆಯೇ? ಯಾವುವು?

* ಓಡಾಡಿ ಆಡುವ ಆಟಗಳ ಪಟ್ಟಿ ತಯಾರಿಸುತ್ತೀರಾ?

* ಈ ಕಥೆಯಲ್ಲಿ 'ಹಾರಿಸಬೇಕು' ಎಂದರೇನು?

* ನಾಯಿಗೂ ಕುರಿಗೂ ಇರುವ ವ್ಯತ್ಯಾಸಗಳೇನು?


* ಹೆಚ್ಚು ಜನ ಏನು ಹೇಳಿದರೂ ನಾವು ಸಾಮಾನ್ಯವಾಗಿ ನಂಬುತ್ತೇವೆ. ಏಕೆ? ಅದು ಸರೀನಾ?

* ಇದೇ ರೀತಿಯ ಇನ್ನೊಂದು ಕಥೆ 'ಚಕ್ರವರ್ತಿಯ ಹೊಸ ಬಟ್ಟೆಗಳು'. ಅದನ್ನೂ ಓದಿ.


* ನಾಯಿಯನ್ನು ಏಕೆ ಹೊರಬಾರದು ಎಂದು ನೀವು ಕೇಳಬಹುದು. (ಹಿಂದಿನ ಕಾಲದಲ್ಲಿ ನಾಯಿ ಅಶುದ್ಧ. ಅದನ್ನು ಎತ್ತಿಕೊಳ್ಳುವುದು ಒಳ್ಳೆಯದಲ್ಲ ಎಂಬ ಭಾವನೆ ಇತ್ತು.)

* ಅವನು ಕುರಿಯನ್ನು ಏಕೆ ತೆಗೆದುಕೊಂಡು ಹೋಗುತ್ತಿರಬಹುದು?

* ನಾಯಿಯಿಂದ ಏನೇನು ಪ್ರಯೋಜನಗಳಿವೆ?



# ನಿಜದ ತಲೆಯ ಮೇಲೆ ಹೊಡೆದ ಹಾಗೆ




# ಹಾಲು ನೀರಿನ ಪಾಲು

ಚರ್ಚೆಯ ಅಂಶಗಳು :

* ಮೊಗಲ್ ರಾಜ ಅಕ್ಬರ್, ಮಂತ್ರಿ ಬೀರಬಲ್ಲನ ಪರಿಚಯ ಮಾಡಿಕೊಳ್ಳಿ.
* ಕ್ಷಾಮ ಎಂದರೇನು? ಅದರ ಪರಿಣಾಮಗಳೇನು? ಹಾಗೆಯೇ ಭೂಕಂಪ, ಪ್ರವಾಹ, ಬಿರುಗಾಳಿ ಇವುಗಳ ಬಗ್ಗೆಯೂ ಚರ್ಚೆ.
* ಹಿಂದಿನ ಕಾಲದಲ್ಲಿ ಸಮಾಚಾರ ಹರಡುವುದಕ್ಕೆ ಇದ್ದ ವಿಧಾನಗಳ ಪರಿಚಯ. (ಉದಾಹರಣೆ : ಡಂಗೂರ)
* ಯಾವ ವಿಧಗಳಿಂದ ಈಗ ಸಮಾಚಾರ ಹರಡಬಹುದು?
* ಊರಿನ ಜನ ಮಾಡಿದ್ದು ಸರಿಯೇನು?
* ನೀವು ಆ ರಾಜ್ಯದವರಾಗಿದ್ದರೆ ಏನು ಮಾಡುತ್ತಿದ್ದೀರಿ?
* ಈಗಿನ ಕಾಲದ ಜನರೆಲ್ಲಾ ನ್ಯಾಯವಂತರೇ?



# ಹಾಲು ನೀರಿನ ಪಾಲು



ನನ್ನ ರಾಜ್ಯದ ಜನರೆಲ್ಲಾ ನ್ಯಾಯವಂತರು.
ದೊರೆ, ಅಷ್ಟು ನಂಬಿಕೆಯೆ! ನಾನು ಹೇಳುವಂತೆ ಡಂಗೂರ ಹೊಡೆಸಿ, ಪರೀಕ್ಷೆ ಮಾಡಿ ನೋಡಿ.
ಕೇಳಿರಿ ಜನರೇ, ರಾಜ್ಯದಲ್ಲಿ ಕ್ಷಾಮ, ನೀವೆಲ್ಲರೂ ಈ ರಾತ್ರಿ ಒಂದೊಂದು ಪಾತ್ರೆ ಹಾಲು ಈ ಹಂಡೆಯಲ್ಲಿ ಹಾಕಿ. ಅದನ್ನು ಬಡವರಿಗೆ ಹಂಚೋಣ.
ರಾಜ್ಯದ ತೊಂದರೆಗೆ ನನ್ನ ಹಾಲು ಹಾಳು. ನೀರು ಹಾಕಿದರೆ ಯಾರಿಗೆ ಗೊತ್ತಾಗುತ್ತೆ?
ಎಲ್ಲರೂ ಹಾಲು ಹಾಕುವಾಗ ನಾನೊಬ್ಬ ನೀರು ಹಾಕಿದರೆ ಯಾರಿಗೂ ತಿಳಿಯೋಲ್ಲ.
ಅರೆ! ಒಂದು ತೊಟ್ಟು ಹಾಲೂ ಇಲ್ಲ – ಬರೀ ನೀರೆ ಇದೇನು?
ಬೇರೆಯವರು ಹಾಲು ಹಾಕ್ತಾರೆ ಅಂತ ಎಲ್ಲರೂ ನೀರು ಹಾಕಿದ್ದಾರೆ. ಸಿಕ್ಕಿಬಿದ್ದರಲ್ಲ ನಿಮ್ಮ ರಾಜ್ಯದ ಜನರು.

# ಬಂಗಾರವೂ ಬೇಡವಾಗುವುದುಂಟೇ ?

**ಚರ್ಚೆಯ ಅಂಶಗಳು :**

* 'ಮೃದಾಸನಂತೆ ಅತಿ ಆಸೆ ಉಳ್ಳವನು' ಎಂಬ ಮಾತು ಬಳಕೆಯಲ್ಲಿದೆ. ಅದರ ಹಿನ್ನೆಲೆ ಈ ಕಥೆ.
* ಚಿನ್ನಕ್ಕಿಂತ ಹೆಚ್ಚಿನ ಬೆಲೆ ಅನ್ನ, ನೀರು, ಪ್ರೀತಿ, ವಿಶ್ವಾಸಗಳಿವೆ ಎಂಬುದನ್ನು ಒಪ್ಪುತ್ತೀರಾ?
* ಗ್ರೀಕ್ ದೇಶ ಎಲ್ಲಿದೆ? ಆ ದೇಶದ ಕಥೆಗಳಲ್ಲಿರುವಂತೆ ನಮ್ಮ ದೇಶದಲ್ಲೂ ದೇವರುಗಳಿಗೆ ಸಂಬಂಧಿಸಿದ ವೇಷಭೂಷಣದ ಬಗ್ಗೆ ಚರ್ಚಿಸಿ.
* ನೀವು ಯಾವ ವರ ಕೇಳುತ್ತೀರಿ? ನಿಜ ಜೀವನದಲ್ಲಿ ವರಗಳು ಸಿಗುತ್ತವೆಯೇ?



# ಬಂಗಾರವೂ ಬೇಡವಾಗುವುದುಂಟೇ?



## ಬೆರಳು ತೋರಿಸಿದರೆ ಅಂಗೈ ನುಂಗುವುದೇ ?

**ಚರ್ಚೆಯ ಅಂಶಗಳು :**


* ಕಥೆಯ ಹೆಸರಿನ ಅರ್ಥದ ಹಿನ್ನೆಲೆಯಲ್ಲಿ ಬೇರೆ ಗಾದೆಗಳ ಚರ್ಚೆ.
* ಮಕ್ಕಳಿಗೆ ಗೊತ್ತಿರುವ ಗಾದೆಗಳನ್ನು ಸಂಗ್ರಹಿಸಿ ಅವು ಹೇಗೆ ಸಮಾಜಕ್ಕೆ ಕನ್ನಡಿ ಹಿಡಿಯುತ್ತವೆ ಎಂದು ಚರ್ಚಿಸಿ.
* ಮರಳುಗಾಡಿನಿಂದ ಪ್ರಾರಂಭಿಸಿ ಬೇರೆ ಬೇರೆ ಭೂಮಿಗಳ ತರಹದ ಚರ್ಚೆ. (ಉದಾಹರಣೆ : ಕರಾವಳಿ, ಗುಡ್ಡಪ್ರದೇಶ, ಕೆಸರಿನ ಪ್ರದೇಶ)
* ಮರಳುಗಾಡಿನಲ್ಲಿ ಒಂಟೆಯನ್ನೇ ಏಕೆ ಬಳಸುತ್ತಾರೆ? ಒಂಟೆಯ ಹಾಗೂ ಇತರ ಪ್ರಾಣಿಗಳ ಚಿತ್ರಗಳನ್ನು ಸಂಗ್ರಹಿಸಿರಿ. ಮೃಗಾಲಯಕ್ಕೆ ಭೇಟಿ ನೀಡಿ.
* ಅರಬರ ವೇಷಭೂಷಣಗಳು ಅವರ ವಾತಾವರಣಕ್ಕೆ ತಕ್ಕಂತೆ ಇವೆ. ಆ ವಾತಾವರಣದ ಪರಿಚಯ.
* ನಿಮಗೆ ಒಂಟೆ ಇಷ್ಟವೋ ಅಥವಾ ಅರಬನೋ?
* ನೀವು ಒಂಟೆಯಾಗಿದ್ದರೆ ಏನು ಮಾಡುತ್ತಿದ್ದೀರಿ? ಅರಬನಾಗಿದ್ದರೆ ಏನು ಮಾಡುತ್ತಿದ್ದೀರಿ?

**ಪ್ರತಿಕ್ರಿಯೆ :**

* ಅರಬ ಕೆಟ್ಟವನು. ಒಂಟೆಯನ್ನು ಚಳಿಯಲ್ಲಿ ಬಿಟ್ಟನು.
* ಬಾಡಿಗೆ ಮನೆಯಲ್ಲಿರುವವರು ಕೆಲವೊಮ್ಮೆ ಇದೇ ರೀತಿ ವರ್ತಿಸುತ್ತಾರೆ.




# ಬೆರಳು ತೋರಿಸಿದರೆ ಅಂಗೈ ನುಂಗುವುದೇ?



# ಆಕಾಶದ ಅಬ್ಬರ


**ಚರ್ಚೆಯ ಅಂಶಗಳು :**

* ಆಫ್ರಿಕಾ ಎಲ್ಲಿದೆ? ನಕ್ಷೆ ಉಪಯೋಗಿಸಿ ಚರ್ಚೆ.
* ಆಕಾಶ ಎಲ್ಲಿದೆ? ಆಕಾಶದಲ್ಲಿನ ಸೂರ್ಯ, ಮೋಡ, ಮಳೆಯ ಸಂಬಂಧದ ಬಗ್ಗೆ ಚರ್ಚಿಸಿ.
* ಮಿಂಚಪ್ಪ ಹಳ್ಳಿಯನ್ನೇ ಸುಟ್ಟಂತೆ ನಿಜವಾಗಿ ಮಿಂಚಿನಿಂದ ಹಾನಿಯುಂಟೆ?
* ವಿದ್ಯುತ್ ವಾಹಕ (ಲೈಟನಿಂಗ್ ಕಂಡಕ್ಟರ್) ಮಿಂಚನ್ನು ಹೀರಿಕೊಳ್ಳುವ ಬಗ್ಗೆ ವಿವರಣೆ.
* ಮಿಂಚು, ಗುಡುಗಿನ ಬಗ್ಗೆ ವೈಜ್ಞಾನಿಕ ವಿವರಣೆ. ಮಿಂಚಿನಂತಹ ವಿದ್ಯುಚ್ಛಕ್ತಿಯನ್ನು ನಾವು ಸೃಷ್ಟಿ ಮಾಡಬಹುದಾದ ಬಗ್ಗೆ ವಿವರಣೆ.
* ಭಾರತದಲ್ಲಿ ಗಾಳಿ, ಮಳೆ, ಸೂರ್ಯ, ಚಂದ್ರ ಇತ್ಯಾದಿಗಳ ಬಗ್ಗೆ ಇರುವ ಕಥೆಗಳ ಪರಿಚಯ ಮಾಡಿಕೊಳ್ಳಿ.





# ಆಕಾಶದ ಅಬ್ಬರ






CH-100 N93
07169
COMMUNITY HEALTH CELL LIBRARY AND


# ತಲೆಗೊಂದು ಮಾತು

ಚರ್ಚೆಯ ಅಂಶಗಳು :

* 'ತಲೆಗೊಂದು ಮಾತು' ಎಂದರೇನು?
* ಗ್ರೀಕ್ ದೇಶದ ಪರಿಚಯ ಮಾಡಿಕೊಳ್ಳಿ.
* ಎಸೋಪ್ ಯಾರು? ಚರಿತ್ರೆಯಲ್ಲಿ ಅವನ ಹೆಸರು ಏಕೆ ಮುಖ್ಯ? ಅವನ ಇತರ ಕಥೆಗಳ ಪರಿಚಯ ಮಾಡಿಕೊಳ್ಳಿ.
* ಕತ್ತೆಗೆ ಯಾವ ಸಲಹೆ ಇಷ್ಟವಾಗಿರಬಹುದು?
* ಕಥೆ ಓದುವಾಗ ನಿಮಗೆ ಯಾವುದು ಇಷ್ಟವಾಯ್ತು? ನೀವು ತಂದೆ/ಮಗನಾಗಿದ್ದರೆ ಕೊನೆಯಲ್ಲಿ ಏನು ಮಾಡುತ್ತಿದ್ದೀರಿ?
* ಕಥೆಯಲ್ಲಿ ಬರುವ ಇತರ ಪಾತ್ರಗಳು ಏನೇನು ಕೆಲಸ ಮಾಡುತ್ತಿರಬಹುದು? ಹೇಗೆ ಊಹಿಸುತ್ತೀರಿ?



# ತಲೆಗೊಂದು ಮಾತು


ಒಮ್ಮೆ ತಂದೆ, ಮಗ ಕತ್ತೆಯನ್ನು ಮಾರಲು ಸಂತೆಗೆ ಹೊರಟರು .....
ಅರೆ, ಕತ್ತೆ ಇದ್ದರೂ ನಡೆದೇ ಹೊರಟರಲ್ಲ!
ಅಷ್ಟು ವಯಸ್ಸಾದವರನ್ನು ನಡೆಸಿ, ನೀನು ಸವಾರಿ ಮಾಡುವುದೊ?
ಸಣ್ಣವನನ್ನು ನಡೆಸುತ್ತೀಯಲ್ಲಾ, ಎಂತಹ ಹಿರಿಯ ನೀನು?
ಎಷ್ಟು ಕ್ರೂರ. ಇಬ್ಬರ ಭಾರದ ಅಡಿಯಲ್ಲಿ ಕತ್ತೆ ಗತಿಯೇನು?

# ಗೋಡೆ ಗಂಡಾಂತರ

ಚರ್ಚೆಯ ಅಂಶಗಳು :

* ಹಾಲೆಂಡ್ ದೇಶದ ಭೂಗೋಳಿಕ ಪರಿಸ್ಥಿತಿ, ಅಲ್ಲಿಯ ಹವಾಮಾನ, ಉಡುಪು ಇತ್ಯಾದಿಗಳ ಬಗ್ಗೆ ವಿವರಣೆ.


* ಸಮುದ್ರದ ಅಬ್ಬರದಿಂದ ನಮ್ಮ ದೇಶದಲ್ಲೂ ಉಂಟಾದ ಅನಾಹುತಗಳ ಬಗ್ಗೆ ಚರ್ಚೆ. ಅದರಿಂದ ಜನರಿಗಾದ ಕಷ್ಟಗಳ ಬಗ್ಗೆ ವಿವರಣೆ.

* ರಾತ್ರಿ, ಹಗಲು ಹೇಗಾಗುತ್ತವೆ?

* ಚಳಿಗಾಲದಲ್ಲಿ ಮೂರ್ಛೆ ಹೋಗಲು ಕಾರಣವೇನು? ಮೂರ್ಛೆ ಹೋದವರನ್ನು ಎಚ್ಚರಿಸಲು ಏನು ಮಾಡಬೇಕು?

* ನೀವು ಆ ಹುಡುಗನ ಸ್ಥಾನದಲ್ಲಿದ್ದರೆ ಏನು ಮಾಡುತ್ತಿದ್ದೀರಿ?

* 'ಧೀರ' ಪದಕ್ಕೆ ಸಂಬಂಧಪಟ್ಟ ಕಥೆ, ಹಾಡುಗಳ ಸಂಗ್ರಹಣೆ.



# ಗೋಡೆ ಗಂಡಾಂತರ


ಹಾಲೆಂಡ್ ದೇಶದ ವಿಶೇಷ ಅದರ ಭಾಗಗಳು, ಸಮುದ್ರದ ಎತ್ತರಕ್ಕಿಂತ ಕೆಳಗಿರುವುದು.
ಜನ, ಗೋಡೆಗಳಿಂದ, ಮರಳು ದಿಬ್ಬಗಳಿಂದ ಸಮುದ್ರವನ್ನು ತಡೆಗಟ್ಟಲೇ ಬೇಕು. ಒಮ್ಮೆ ಏನಾಯ್ತು .....
ಅರೆ, ನೀರು ಸೋರುತ್ತಿದೆ, ಗೋಡೆ ಒಡೆದರೆ ಸಮುದ್ರ ನುಗ್ಗತ್ತೆ.
ಜನರನ್ನ ಕರೆದು ಬರೋ ಹೊತ್ತಿಗೆ, ಗೋಡೆ ಬೀಳಬಹುದು. ಇದೇ ಸರಿ, ಬೆಳಿಗ್ಗೆ ಯಾರಾದ್ರೂ ಬಂದೇ ಬರ್ತಾರೆ.
ಮಗು ಇನ್ನೂ ಬಂದಿಲ್ಲ.
ನಡೀರಿ, ಎಲ್ಲ ಕಡೆ ಹುಡುಕೋಣ.
ಚಳಿಗೆ ಮೂರ್ಛೆ ಹೋಗಿದ್ದಾನೆ, ಪಾಪ.
ನೋಡಿ ನೀರು!
ಎಂಥ ಧೀರ, ಗೋಡೆ ಉಳಿಸಿ ಊರೇ ಉಳಿಸಿದ.


# ಕತ್ತೆಯ ತಕ್ಕಡಿ

ಚರ್ಚೆಯ ಅಂಶಗಳು :


* ಗ್ರೀಕ್ ದೇಶದ ಪರಿಚಯ, ಮಕ್ಕಳ ಕಥೆಗಳಿಗೆ ಅಲ್ಲಿ 'ಎಸೋಪ'ನ ದೊಡ್ಡ ಕಾಣಿಕೆ. ಇವುಗಳ ಬಗ್ಗೆ ವಿವರಣೆ.
* ಕಷ್ಟಪಟ್ಟು ದುಡಿಯುವವರನ್ನು ಕತ್ತೆಗೆ ಹೋಲಿಸುವುದು ಸರಿಯೇ?
* ಕುದುರೆಗಳು ಬರುವುದು ಅದರ ಕಾಲು ಸಪ್ಪಳದಿಂದ ಗೊತ್ತಾದ ಹಾಗೆ ಸಪ್ಪಳದಿಂದ ಬೇರೆ ಏನೇನನ್ನು ತಿಳಿಯಲು ಸಾಧ್ಯ? (ಉದಾಹರಣೆಗೆ ಮಗು ಅತ್ತರೆ, ಸೈಕಲ್ ಗಂಟೆ ಬಾರಿಸಿದರೆ, ನಲ್ಲಿ ಸದ್ದು ಮಾಡಿದರೆ.)
* ಕತ್ತೆಯ ಯೋಚನೆ ಬಗ್ಗೆ ನಿಮಗೇನನಿಸುತ್ತದೆ?
* ನೀವು ಅದರ ಜಾಗದಲ್ಲಿದ್ದರೆ ಏನು ಮಾಡುತ್ತಿದ್ದೀರಿ?

ಪ್ರತಿಕ್ರಿಯೆ :

* ನಾನು ಕತ್ತೆಯಾಗಿದ್ದರೆ ಕಾಡಿನೊಳಗೆ ಓಡಿಹೋಗಿ ಆರಾಮಾಗಿರುತ್ತಿದ್ದೆ. ಕೆಲಸ ನಮಗೋಸ್ಕರ ಮಾಡಬೇಕು, ಬೇರೆಯವರಿಗೋಸ್ಕರ ಯಾಕೆ ಮಾಡಬೇಕು?



# ಕತ್ತೆಯ ತಕ್ಕಡಿ



ಅಯ್ಯೋ, ಅಮ್ಮಾ!
ಹೂಂ, ಬೇಗ ನಡಿ.
ಕುದುರೆಗಳು ಓಡುವ ಸದ್ದು.
ಕಳ್ಳರು! ಹತ್ತಿರಾನೇ ಇದ್ದಾರೆ, ಓಡು!
ಹೌದು! ನಾನು ಸಿಕ್ಕಿಬಿದ್ದರೆ ಏನು ಮಾಡ್ತಾರೆ?
ಇನ್ನೇನು ಮಾಡ್ತಾರೆ? ಭಾರ ಹೊರಿಸ್ತಾರೆ. ಅದೆಲ್ಲಾ ಯಾಕೆ, ಸುಮ್ಮನೆ ಓಡು.
ನಿನ್ನ ಹಾಗೆ ಅವರೂ ಭಾರ ಹೊರಿಸುತ್ತಾರೆ. ನಾನು ಸುಮ್ಮನೆ ಯಾಕೆ ಸುಸ್ತು ಮಾಡಿಕೊಳ್ಳಲಿ? ನೀನು ಬೇಕಾದರೆ ಓಡು.

## ನಿಮ್ಮ ಟಿಪ್ಪಣಿಗಾಗಿ :

## ಮಾರಾಟಕ್ಕಿರುವ ಪುಸ್ತಕಗಳು, ದಾಖಲೆಗಳು

- ಪುಟಕ್ಕೋಮು ಕಥೆ ( ಸಂಪುಟ 2 )
  ಸಿ.ಡಬ್ಲ್ಯು.ಸಿ., 1995
- ನಮ್ಮ ಹೊಳೆಯಮ್ಮ ( ಕನ್ನಡ/ಇಂಗ್ಲೀಷ್ ) ರೂ. 15
  ಮಕ್ಕಳಿಗಾಗಿ ಕಥೆ
  ಸಿ.ಡಬ್ಲ್ಯು.ಸಿ., 1992
- ಮಂಜನ ಸುಂಕದ ಕಟ್ಟೆ ರೂ. 10
  ಮಕ್ಕಳಿಗಾಗಿ ಕೈಗೊಂಬೆ ನಾಟಕ
  ಬೊಂಬೆ ಮಾಡುವ ವಿಧಾನದೊಂದಿಗೆ
  ಸಿ.ಡಬ್ಲ್ಯು.ಸಿ.
- ಸೂಕ್ತ ಶಿಕ್ಷಣದ ಬಗ್ಗೆ ಮಕ್ಕಳ ವರದಿ ( ಇಂಗ್ಲೀಷ್/ಕನ್ನಡ )
  ಸಿ.ಡಬ್ಲ್ಯು.ಸಿ., 1995

  ವರಾಹಿಯೊಂದಿಗೆ ಸಂಭಾಷಣೆ
  ವರಾಹಿ ಪರಿಚಯದ ವರದಿ
  ಸಿ.ಡಬ್ಲ್ಯು.ಸಿ., 1993
- ಮಕ್ಕಳ ಹಕ್ಕುಗಳು ರೂ. 110
- ಕತ್ತಲೆಯ ಮಕ್ಕಳು ರೂ. 25
- ಪ್ರಪಂಚ ಮರೆಯಲೆತ್ನಿಸುವ ಮಕ್ಕಳು ರೂ. 150
- ವಿಚಾರಣ ಸಮಿತಿಯ ವರದಿ-ಸುರುಚಿ ರೂ. 20
  ಹೋಟೆಲಿನ ಅಗ್ನಿ ದುರಂತದ ಬಗ್ಗೆ.
  ಭೀಮ ಸಂಘ, ಸಿ.ಡಬ್ಲ್ಯು.ಸಿ., 1992
- ವಿಚಾರಣ ಸಮಿತಿ ವರದಿ-ಮಿನಾನಂಪಟ್ಟಿ ರೂ. 10
  ಪಟಾಕಿ ಕಾರ್ಖಾನೆಯಲ್ಲಿ ನಡೆದ ದುರ್ಘಟನೆಯ ಬಗ್ಗೆ.
  ಭೀಮ ಸಂಘ, ಸಿ.ಡಬ್ಲ್ಯು.ಸಿ., 1991

### ■ ಭಿತ್ತಿ ಚಿತ್ರಗಳು

- ಮಕ್ಕಳ ಹಕ್ಕುಗಳು - ಚಿತ್ರಕಾರ ಎಸ್.ಎಸ್. ಪೋಸ್ನಪ್ಪ ರೂ. 25
  (5 ಪೋಸ್ಟರ್‌ಗಳ ಕಟ್ಟು)
- ನಾನು ನನ್ನ ಹಾಗೆ ತಮ್ಮ ನಗುವನ್ನು ಕಳೆದುಕೊಂಡ, ರೂ. 7
  100 ಮಿಲಿಯನ್ ಮಕ್ಕಳನ್ನು ಪ್ರತಿನಿಧಿಸುತ್ತೇನೆ (ಕಪ್ಪು/ಬಿಳಿ)

### ■ ಗೋಡೆ ಪತ್ರಿಕೆ

- 'ಭೀಮ' - ಬಾಲಕಾರ್ಮಿಕರ ಗೋಡೆ ಪತ್ರಿಕೆ (ಮಾಸಿಕ) ಬಿಡಿ ಪ್ರತಿ ರೂ. 10
  ವಾರ್ಷಿಕ ಚಂದಾ ರೂ. 120

### ■ ವಾರ್ತಾ ಪತ್ರ

- 'ಮೊಳಕೆ' - ಇಂಗ್ಲೀಷ್ ತ್ರೈಮಾಸಿಕ ಪತ್ರಿಕೆ
  ವಾರ್ಷಿಕ ಚಂದಾ ರೂ. 25
  ಅಜೀವ ಚಂದಾ ರೂ. 250

(ಈ ಪತ್ರಿಕೆಗಳನ್ನು ಬಯಸುವವರು ಚಂದಾ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮೂಲಕ ಕಳುಹಿಸಬೇಕು.)

ಸಿ.ಡಬ್ಲ್ಯು.ಸಿ.
303/2, ಎಲ್.ಬಿ. ಶಾಸ್ತ್ರಿ ನಗರ,
ವಿಮಾನ ಪುರ ಪೋಸ್ಟ್,
ಬೆಂಗಳೂರು - 560 017.
ದೂರವಾಣಿ: 5272111, 5275258